ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 23 | ಜೂನ್ 7, 1981 | ಬೆಲೆ : 60 ಪೈಸೆ

ಕಾಂಗ್ರೆಸ್ಸಿಗೆ ಉತ್ತರ

ಪಶ್ಚಿಮ ಬಂಗಾಳದಲ್ಲಿ ಭಾನುವಾರ 87 ಪುರಸಭೆಗಳಿಗೆ ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ರಂಗ ಮತ್ತು ಸಿ. ಪಿ. ಐ. ಕೂಟಕ್ಕೆ ಹೆಚ್ಚಿನ ಬಹುಮತ ದೊರೆತಿದೆ. ಈ ಪುರಸಭೆಗಳ ಒಟ್ಟು 1490 ಸ್ಥಾನಗಳ ಪೈಕಿ ಎಡರಂಗದ ಕೂಟಕ್ಕೆ 912 ಸ್ಥಾನಗಳು ದೊರೆತಿವೆ. ಉಳಿದ ಸ್ಥಾನಗಳು ಪಕ್ಷೇತರರಿಗೆ ಮತ್ತು ವಿರೋಧ ಪಕ್ಷಗಳಿಗೆ ದೊರೆತಿವೆ. ಅದರಲ್ಲೂ ಪಕ್ಷೇತರ ಅಭ್ಯರ್ಥಿಗಳಿಗೆ 471 ಸ್ಥಾನಗಳು ದೊರೆತಿವೆ. ವಿರೋಧ ಪಕ್ಷಗಳಿಗೆ ಕೇವಲ 63 ಸ್ಥಾನಗಳು ದೊರೆತಿವೆ. ಶೇಕಡಾ 75ಕ್ಕಿಂತಲೂ ಹೆಚ್ಚಿಗೆ ಪುರಸಭೆಗಳಲ್ಲಿ ಎಡ ರಂಗದ ಕೂಟಕ್ಕೆ ಬಹುಮತ ಸಿಕ್ಕಿದೆ.

ಜೂನ್ 14ರಂದು ಪಶ್ಚಿಮ ಬಂಗಾಳದಲ್ಲೂ ಸೇರಿದಂತೆ ದೇಶದ ಹಲವಾರು ಕಡೆ ಉಪಚುನಾವಣೆಗಳು ನಡೆಯಲಿರುವ ಸಂದರ್ಭದಲ್ಲಿ, ಈ ಫಲಿತಾಂಶ ಬಹಳ ಪ್ರಾಧಾನ್ಯತೆ ಪಡೆಯುತ್ತದೆ. ಪಶ್ಚಿಮ ಬಂಗಾಳದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂದು ಬೊಬ್ಬೆ ಇಟ್ಟು, ಎಡ ರಂಗ ಸರಕಾರವನ್ನು ಉರುಳಿಸಲು ಕಾಂಗ್ರೆಸ್ಸು ಪ್ರಯತ್ನ ನಡೆಸುತ್ತಲಿದ್ದು, ಪುರಸಭೆ ಚುನಾವಣೆಯನ್ನು ಅದು ಬಹಿಷ್ಕರಿಸಿತ್ತು. ಇತ್ತೀಚೆಗೆ ಹಿಂಸಾಚಾರವನ್ನು ನಡೆಸಿ, ಎಡರಂಗ ಸರಕಾರದ ಮೇಲೆ ಮಸಿ ಬಳಿಯಲು ಕಾಂಗ್ರೆಸ್ಸು ಪ್ರಯತ್ನಿಸಿತು. ಆದರೂ ಪಟ್ಟಣ ಪ್ರದೇಶಗಳಲ್ಲಿ ಶೇಕಡಾ 65ಕ್ಕಿಂತಲೂ ಹೆಚ್ಚು ಮಂದಿ ಮತದಾನ ನಡೆಸಿದ್ದರು. ಕಾಂಗ್ರೆಸ್ಸು

ಸಂಪಾದಕೀಯ

ಬಹಿಷ್ಕಾರದ ಕರೆಗೆ ಜನ ಓಗೊಟ್ಟಿಲ್ಲವೆಂಬುದು ಇದರಿಂದ ಸ್ಪಷ್ಟ. ಎಷ್ಟೋ ಕಡೆ ಕಾಂಗ್ರೆಸ್ಸು ಅಧಿಕಾರದಲ್ಲಿದ್ದು ಈ ಪಕ್ಷವು ಚುನಾವಣೆಗಳಲ್ಲಿ ಭಾಗವಹಿಸುವಲ್ಲಿ ಮತಕಟ್ಟೆಗೆ ಹೋಗುವುದಕ್ಕಿಂತ ಹೆಚ್ಚಿನ ಜನ ಪುರಸಭೆ ಚುನಾವಣೆಯಲ್ಲಿ ಮತದಾನ ಮಾಡಿರುವರು. ಪಟ್ಟಣ ಪ್ರದೇಶಗಳಲ್ಲಿ ಎಡರಂಗಕ್ಕೆ ಜನತೆಯು ಬೆಂಬಲವೀಯುತ್ತಲಿದೆ ಎಂಬುದೂ ಗಮನಾರ್ಹ.

ಬಂಗಾಳದಲ್ಲಿ ನಡೆಸುವ ಕುತಂತ್ರಗಳನ್ನೇ ಕಾಂಗ್ರೆಸ್ಸು ಕೇರಳದಲ್ಲೂ ನಡೆಸುತ್ತಲಿದೆ. ಆರ್. ಎಸ್. ಎಸ್. ಮತ್ತು ನಕ್ಸಲೈಟುಗಳಿಗೆ ಬೆಂಬಲ ವಿತ್ತು ಹಿಂಸಾಚಾರ ನಡೆಸಿ ಕೇರಳದ ಎಡ ಪ್ರಜಾಪ್ರಭುತ್ವರಂಗ ಸರಕಾರಕ್ಕೆ ಮಸಿಬಳಿಯಲು ಪ್ರಯತ್ನಿಸುವುದು, ದೇವಾಲಯಗಳಿಂದ ಚಿನ್ನಾಭರಣ ಮತ್ತು ಮೂರ್ತಿಗಳನ್ನು ಕದಿಸುವುದರ ಮೂಲಕ ಕೇರಳ ಸರಕಾರವು ಧರ್ಮದ ವಿರೋಧಿ ಎಂದು ಗೊಂದಲಮಾಡುವುದು ಇವೆಲ್ಲಾ ನಡೆಯುತ್ತಲಿವೆ. ಮೊನ್ನೆತಾನೇ ಕೇಂದ್ರದ ರಾಜ್ಯ ಗೃಹಖಾತೆ ಸಚಿವ ಯೋಗೇಂದ್ರ ಮಕ್ವಾನಾ ಅವರು ಕೇರಳಕ್ಕೆಹೋಗಿ, ಕೇರಳದಲ್ಲಿನ ಪರಿಸ್ಥಿತಿ 1959ರ ಪರಿಸ್ಥಿತಿಯಂತೆಯೇ ಇದೆ ಎಂದು ಘೋಷಿಸುವುದರ ಹಿಂದೆ ಇರುವ ಉದ್ದೇಶ ಸ್ಪಷ್ಟ ಇದೆ. ಜನಬೆಂಬಲ ಯಾರಿಗೆ ಇದೆ ಎಂಬುದನ್ನು ತಿಳಿಯಬೇಕಾದರೆ ಮತ್ತೆ ಚುನಾವಣೆ ನಡೆಸಿರಿ ಎಂದು ಕಾಂಗ್ರೆಸ್ಸಿಗೆ ಕೇರಳದ ಮುಖ್ಯ ಮಂತ್ರಿ ಇ. ಕೆ. ನಾಯನಾರ್ ಅವರು ಸವಾಲು ಹಾಕಿರುವರು. ಕೇರಳವಿರಲಿ, ಬಂಗಾಳವಿರಲಿ ಅಥವಾ ಎಲ್ಲೇ ಇರಲಿ ಕೊನೆಗೆ ತೀರ್ಮಾನ ಕೊಡಬೇಕಾಗಿರುವುದು ಜನತೆ.

ಮಕ್ವಾನಾರ ಹೇಳಿಕೆ ಪ್ರತಿಭಟಿಸಿ

ನಾಯನಾರ್ ಸವಾಲ್

ಕಾಂಗ್ರೆಸ್ಸು ಆಡಳಿತದಲ್ಲಿರುವ ರಾಜ್ಯಗಳ ಪರಿಸ್ಥಿತಿಗಿಂತ ಎಷ್ಟೋಪಟ್ಟು ಕೇರಳದಲ್ಲಿ ಪರಿಸ್ಥಿತಿ ಉತ್ತಮವಿದೆ ಎಂದು ಕೇರಳದ ಮುಖ್ಯಮಂತ್ರಿ ಕಾಂ. ಇ. ಕೆ. ನಾಯನಾರ್ ನುಡಿದಿದ್ದಾರೆ.

ಕೇರಳದ ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂದು ಕೇಂದ್ರ ಗೃಹಖಾತೆ ರಾಜ್ಯಸಚಿವ ಯೋಗೇಂದ್ರ ಮಕ್ವಾನಾ ಅವರ ಹೇಳಿಕೆಯನ್ನು ಕಾಂ. ನಾಯನಾರ್ ಉಗ್ರವಾಗಿ ಪ್ರತಿಭಟಿಸಿದ್ದಾರೆ. ತಿರುವನಂತಪುರದಲ್ಲಿ ಪತ್ರಿಕಾ ಪ್ರತಿನಿಧಿಗಳನ್ನುದ್ದೇಶಿಸಿ ಕಾಂ. ನಾಯನಾರ್ ಮಾತನಾಡುತ್ತಿದ್ದರು. "ಮಕ್ವಾನಾರ ಬೇಜವಾಬ್ದಾರಿ ಹೇಳಿಕೆಗಳಿಂದ ಸಂವಿಧಾನಾತ್ಮಕ ಔಚಿತ್ಯದ ಉಲ್ಲಂಘನೆಯಾಗಿದೆ. ಕೇಂದ್ರದ ಜವಾಬ್ದಾರಿ ಮಂತ್ರಿಯಾಗಿ ಕೇರಳದ ಪರಿಸ್ಥಿತಿ ಕುರಿತು ಕೇರಳ ಸರಕಾರದ ಯಾರೊಟ್ಟಿಗೂ ಮಕ್ವಾನಾರು ಚರ್ಚಿಸಿಲ್ಲ. ಕೇರಳ ಪರಿಸ್ಥಿತಿ ಕುರಿತು ನೀಡಿದ ಹೇಳಿಕೆಗಳನ್ನು ಸಿದ್ಧಮಾಡಿ(Prove) ತೋರಿಸಲಿ" ಎಂದು ಕಾಂ. ನಾಯನಾರ್ ಸವಾಲೆಸೆದಿದ್ದಾರೆ.

"ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ರಂಗದಲ್ಲಿ ಬಿರುಕುಂಟು ಮಾಡಲು ಕೇಂದ್ರದ ಅನೇಕ ಮಂತ್ರಿಗಳು ಕೇರಳಕ್ಕೆ ಭೇಟಿಕೊಟ್ಟಿದ್ದರು. ಅದರಲ್ಲೂ ಸಂಪರ್ಕಖಾತೆ ಮಂತ್ರಿ ಸ್ಟೀಫನ್ ಅನವರತ ಶ್ರಮಿಸಿದ್ದರು. ಈ ಪ್ರಯತ್ನಗಳು ಶೋಚನೀಯವಾಗಿ ವಿಫಲಗೊಂಡವು. ಸರಕಾರಕ್ಕೆ ಕಿರುಕುಳ ಕೊಡುವ ಉದ್ದೇಶದಿಂದಲೇ "ರಾಜಭವನ ಮೋರ್ಚಾ" ಏರ್ಪಡಿಸಲಾಗಿತ್ತು. ಅದೂ ಸಂಪೂರ್ಣ ವಿಫಲಗೊಂಡಿದೆ. ಶ್ರೀಮಾನ್ ಮಕ್ವಾನಾರು ಕೇರಳ ಪರಿಸ್ಥಿತಿ ಕುರಿತು ಮಾತನಾಡುವ ಮೊದಲು ಜಾತಿ ಕಲಹದಲ್ಲಿ 42 ಜನರನ್ನು ಬಲಿತೆಗೆದುಕೊಂಡ ತಮ್ಮದೇ ರಾಜ್ಯವಾದ ಗುಜರಾತಿನಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸಲಿ" ಎಂದು ನಾಯನಾರ್ ನುಡಿದರು.

"ರಾಜ್ಯಭವನ ಮೋರ್ಚಾ"ದಂದು ರಾಜ್ಯಪಾಲರಿಗೆ ವಿರೋಧಿ ಪಕ್ಷಗಳು ಮನವಿಸಲ್ಲಿಸಿದ್ದವು. ರಾಜ್ಯಪಾಲರಿಂದ ಈ ಮನವಿ ಬಗ್ಗೆ ವರದಿ ಬಂದ ನಂತರ ಯೋಗ್ಯಕ್ರಮ ಕೈಗೊಳ್ಳಲಾಗುವದೆಂದು ಮಕ್ವಾನಾ ಹೇಳಿದ್ದರು. ಈ ಬಗ್ಗೆ ಕಾಂ. ನಾಯನಾರ್ ಮಾತನಾಡುತ್ತಾ "ಈ ಮನವಿಯು ಪ್ರತಿ ನಮಗೂ ತಲುಪಿದೆ. ಕೇರಳದಲ್ಲಿ ಪರಿಸ್ಥಿತಿ ಹದಗೆಡುವಂತೆ ಕೇಂದ್ರ ಮಂತ್ರಿಗಳೂ ವಿರೋಧಿ ಪಕ್ಷಗಳೂ ಪ್ರಯತ್ನಿಸುತ್ತಿದ್ದಾರೆ. ರಾಜ್ಯಪಾಲರಿಗೆ ಮನವಿ ಕುರಿತು ಸರಿಕಂಡ ನಿಲುವು ತೆಗೆದುಕೊಳ್ಳಲು ಅರ್ಹತೆಯಿದೆ. ಆದರೆ ಈ ವಿಷಯಗಳನ್ನು ಕುರಿತು ನಾವು ಪ್ರಧಾನಮಂತ್ರಿ ಕರೆಯಲಿರುವ ಸಮ್ಮೇಳನದಲ್ಲಿ ಚರ್ಚಿಸುತ್ತೇವೆ" ಎಂದರು.

ನಕ್ಸಲೀಯರ ಚಟುವಟಿಕೆ ಕುರಿತು ಮಾತನಾಡುತ್ತಿದ್ದ ಕಾಂ. ನಾಯನಾರ್

[ಕಡೇ ಪುಟ ನೋಡಿ]

ಸಾಮಾಜಿಕ ಉತ್ಪಾದನೆಯಲ್ಲಿ ಭಾಗಿಗಳಾಗಲು

ಮಹಿಳೆಯರಿಗೆ ಕಾಂ. ಸುಶೀಲಾ ಗೋಪಾಲನ್‌ರ ಕರೆ

ಮಹಿಳೆಯರು ಅಡುಗೆ ಮನೆಯಿಂದ ಹೊರಬಂದು ಸಾಮಾಜಿಕ ಉತ್ಪಾದನೆಯಲ್ಲಿ ಭಾಗವಹಿಸಿದಾಗ ಮಾತ್ರ ಆಕೆಗೆ ನಿಜವಾದ ಸ್ವಾತಂತ್ರ್ಯ ಬರುತ್ತದೆ ಎಂದು ಕಾಂ. ಸುಶೀಲಾ ಗೋಪಾಲನ್ ಹೇಳಿದರು.

ಬೆಂಗಳೂರಿನಲ್ಲಿ ಜೂನ್ 1ರಿಂದ 3ರ ವರೆಗೆ ನಡೆದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯನ್ನು ಉದ್ಘಾಟಿಸುತ್ತಾ ಕಾಂ. ಸುಶೀಲಾ ಮಾತನಾಡುತ್ತಿದ್ದರು. ನಗರದ ರಾಮೇಶ್ವರಿ ಕಲ್ಯಾಣ ಮಂಟಪದಲ್ಲಿ 3 ದಿನ ನಡೆದ ಸಮ್ಮೇಳನಕ್ಕೆ ರಾಜ್ಯದ ಬೇರೆ ಬೇರೆ ಕಡೆಯಿಂದ 197 ಪ್ರತಿನಿಧಿಗಳು ಆಗಮಿಸಿದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಲೇಖಕಿ ಡಾ॥ ಅನುಪಮಾ ನಿರಂಜನರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎನ್. ಜಿ. ಓ. ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷೆ ಶ್ರೀಮತಿ ಮೇರಿ ದೇವಾಸಿಯಾ ಮತ್ತು ಶ್ರೀಮತಿ ದೇವಕಿ ವಾರಿಯರ್ ಆಗಮಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿ ಕಾಂ. ಸುಶೀಲಾ ಮಾತನಾಡುತ್ತಾ ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಇರುವ ಈಗಿನ ಕಾನೂನುಗಳಲ್ಲಿ ಸಮಗ್ರ ಬದಲಾವಣೆಯಾಗಬೇಕೆಂದು ಅಭಿಪ್ರಾಯಪಟ್ಟರು. ಮಹಿಳೆಯರಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ತಾರತಮ್ಯದ ಬಗ್ಗೆ ವಿವರಿಸಿದರು. "ವಿಶ್ವಸಂಸ್ಥೆಯ ಸಮೀಕ್ಷೆಯ ಪ್ರಕಾರ ಜಗತ್ತಿನ ಮೂರನೇ ಎರಡು ಪಾಲು ಕೆಲಸಮಾಡುವವರು ಮಹಿಳೆಯರು. ಆದರೆ ವರಮಾನದಲ್ಲಿ ಅವರ ಪಾಲು ಹತ್ತರಲ್ಲಿ ಒಂದಂಶ ಮಾತ್ರ. ಸಂಪತ್ತಿನ ಮಾಲೀಕತ್ವ ಕೇವಲ ನೂರರಲ್ಲೇ ಒಂದು ಭಾಗ ಮಾತ್ರ" ಎಂದರು.

"ಮಹಿಳೆಯರ ಹಿತರಕ್ಷಣೆಗಾಗಿಯೇ ರಚಿತವಾಗಿರುವ ಪ್ರಸಕ್ತ ಕಾನೂನುಗಳು ವಿಫಲಹೊಂದಿರುವ ಇಂದಿನ ಸಂದರ್ಭದಲ್ಲಿ ಈ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವಂತೆಮಾಡಲು ಮಹಿಳಾ ಸಂಘಟನೆಗಳು ಒತ್ತಾಯಿಸಬೇಕು. ಅತ್ಯಾಚಾರ, ದಬ್ಬಾಳಿಕೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಇಂದು ನ್ಯಾಯ ದೊರಕುತ್ತಿಲ್ಲ. ಕಾನೂನಿನ ಚೌಕಟ್ಟೇ ಈ ರೀತಿ ಇರುವುದು. ಈಗಿನ ಕಾನೂನುಗಳಿಂದ ಕಿಂಚಿತ್ತೂ ಪ್ರಯೋಜನವಿಲ್ಲ. ರಾಷ್ಟ್ರದಲ್ಲಿ ಆಸ್ತಿಹಕ್ಕು, ವರದಕ್ಷಿಣೆ ಬಗ್ಗೆ ಅನೇಕ ಕಾನೂನುಗಳು ಅಸ್ತಿತ್ವದಲ್ಲಿವೆ. ಕೆಲವು ಕಾನೂನುಗಳು ಮಹಿಳೆಯರ ವಿರುದ್ಧವಾಗಿಯೇ ಇವೆ. ಸಮಾಜದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿ ಬದಲಾಗಬೇಕು" ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ॥ ಅನುಪಮಾ ನಿರಂಜನ ಅವರು ಮಾತನಾಡುತ್ತಾ, ಸ್ತ್ರೀ ವಿಮೋಚನಾ ಚಳುವಳಿ ಎಂದರೆ ಪುರುಷರ ವಿರುದ್ಧ ಎಂದರ್ಥವಲ್ಲ. ಸ್ತ್ರೀ ನಿಜವಾಗಿಯೂ ವಿಮೋಚನೆಯಾಗಬೇಕಾದರೆ ಹೋರಾಟ ವ್ಯವಸ್ಥೆಯ ವಿರುದ್ಧ ನಡೆಯಬೇಕು. ನಿರಕ್ಷರತೆ, ಮೌಢ್ಯ, ಭ್ರಮೆಯಲ್ಲಿ ಮುಳುಗಿರುವ ಮಹಿಳೆಯರಲ್ಲಿ ಅರಿವುಂಟುಮಾಡಲು ಮುಂದೆ ಬರಬೇಕೆಂದು ವಿದ್ಯಾವಂತ ಮಹಿಳೆಯರಿಗೆ ಕರೆ ನೀಡಿದರು.

ಶ್ರೀಮತಿ ದೇವಕಿ ವಾರಿಯರ್ ಸ್ಮರಣಸಂಚಿಕೆ ಬಿಡುಗಡೆ ಮಾಡಿದರು. ಅಸಮಾನತೆ ತೊಲಗಿಸುವಲ್ಲಿ ಸಕ್ರಿಯವಾಗಿ ಹೋರಾಡಬೇಕೆಂದರು. ಸ್ವಾಗತಸಮಿತಿಯ ಅಧ್ಯಕ್ಷೆ ಎನ್. ಗಾಯಿತ್ರಿದೇವಿ ಸ್ವಾಗತಿಸಿದರು. ಕೃಷಿ ವಿಶ್ವವಿದ್ಯಾಲಯದಲ್ಲಿ ದುಡಿಯುತ್ತಿರುವ ಧಾರವಾಡದ ಶ್ರೀಮತಿ ಲಕ್ಷ್ಮಮ್ಮ ಪ್ರಾರಂಭದಲ್ಲಿ ಧ್ವಜಾರೋಹಣ ಮಾಡಿದರು.

ಮರುದಿನ (2ರಂದು) ಪ್ರತಿನಿಧಿಗಳ ಅಧಿವೇಶನವಿತ್ತು. ಮಹಿಳಾ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಚರ್ಚೆಯಲ್ಲಿ ಪ್ರತಿನಿಧಿಗಳನೇಕರು ಪಾಲ್ಗೊಂಡಿದ್ದರು. ಮಹಿಳೆಯರ ಹಿತರಕ್ಷಣೆಗಾಗಿ ಮಹಿಳಾ

(ಕಡೇ ಪುಟ ನೋಡಿ)

ಕಾಂಗ್ರೆಸ್ ಗೂಂಡಾಗಳ ಉಪಕರಣವಾಗಿರುವ

ಪೋಲೀಸ್ ಕಮೀಷನರ್ ನಿಜಾಮುದ್ದೀನ್

ಬೆಂಗಳೂರು ನಗರ ಪೋಲೀಸ್ ಕಮೀಷನರ್ ಆಗಿ ನಿಜಾಮುದ್ದೀನ್ ಅವರ ಆಗಮನ ಬೆಂಗಳೂರು ಜನತೆಯ ನಾಗರೀಕ ಹಕ್ಕುಗಳನ್ನು ಅಪಾಯದಲ್ಲಿ ಸಿಕ್ಕಿಸಿದೆ. ಸಂವಿಧಾನಾತ್ಮಕವಾಗಿ ದೊರೆತ ಹಕ್ಕುಗಳನ್ನು ನಾಗರೀಕರಿಂದ ಕಸಿದುಕೊಳ್ಳಲಾಗಿದೆ. ಟ್ರೇಡ್‌ಯೂನಿಯನ್‌ಗಳನ್ನು ಸಂಘಟಿಸುವ ಕಾರ್ಮಿಕರ ಹಕ್ಕು, ಸರ್ವ ಸದಸ್ಯರ ಸಭೆಗಳನ್ನು ನಡೆಸುವ ಹಕ್ಕು, ಬಹಿರಂಗ ಸಭೆಗಳನ್ನು ನಡೆಸುವ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಶಸ್ತ್ರ ಸನ್ನದ್ಧ ಪೋಲೀಸರು ಕಾರ್ಮಿಕರು ಸಭೆ ನಡೆಸುವ ಖಾಸಗಿ ಸ್ಥಳಗಳಿಗೆ ಬಂದು ಕಾರ್ಮಿಕರ ಮೇಲೆ ಧಾಳಿ ಮಾಡುವ ಕಾಂಗ್ರೆಸ್ (ಐ) ಗೂಂಡಾಗಳಿಗೆ ರಕ್ಷಣೆ ಕೊಡುತ್ತಿದ್ದಾರೆ.

ನಿಜಾಮುದ್ದೀನ್ ಅಧಿಕಾರಕ್ಕೆ ಬಂದ ನಂತರ, ಕಾಂಗ್ರೆಸ್ (ಯು) ಆಫೀಸನ್ನು ಮುತ್ತಿಗೆ ಹಾಕಿದ್ದ ಕಾಂಗ್ರೆಸ್ (ಐ) ರೌಡಿಗಳಿಗೆ ಪೋಲೀಸರು ರಕ್ಷಣೆ ನೀಡಿದ್ದರು. ಮೈಕೋ ಕಾರ್ಮಿಕರ ಸಂಘದ ಕಛೇರಿಯನ್ನು ಎಫ್.ಎಂ. ಖಾನ್ ನೇತೃತ್ವದ ಕಾಂಗ್ರೆ ಗೂಂಡಾಗಳು ಕಾನೂನು ಬಾಹಿರವಾಗಿ ವಶಪಡಿಸಿಕೊಂಡಾಗ ಸಹ ಇದೇ ನಿಜಾಮುದ್ದೀನರ ಪೋಲೀಸ್ ಪಡೆ ಗೂಂಡಾಗಳಿಗೆ ರಕ್ಷಣೆ ನೀಡಿತ್ತು.

ನಿಜಾಮುದ್ದೀನರು ಪಟ್ಟಕ್ಕೆ ಬಂದ ದಿನದಿಂದಲೂ ಕರ್ನಾಟಕ ಪೋಲೀಸ್ ಆಕ್ಟ್‌ನ 35ನೇ ಸೆಕ್ಷನ್ ಅಡಿಯಲ್ಲಿ ನಾಲ್ಕು ಮಂದಿಗಿಂತ ಹೆಚ್ಚು ಜನ ಗುಂಪು ಸೇರುವುದನ್ನು ನಿಷೇಧಿಸುವ ಅಜ್ಞೆ ಜಾರಿಯಲ್ಲಿದೆ. ಕೇಂದ್ರ ಉದ್ಯಮಗಳ ನೌಕರರು ಮುಷ್ಕರದಲ್ಲಿದ್ದಾಗ ಸರ್ವಸದಸ್ಯರ ಸಭೆ ನಡೆಸಲು ಅನುಮತಿಯನ್ನು ನಿರಾಕರಿಸುತ್ತಲೇ ಬರಲಾಯಿತು. ಯಾವುದಾದರೂ ಸಣ್ಣ ಫ್ಯಾಕ್ಟರಿಯಲ್ಲಿ ಮುಷ್ಕರ ನಡೆಯುವ ಸೂಚನೆ ಸಿಕ್ಕಿದರೂ ಸಾಕು 35ನೇ ಸೆಕ್ಷನ್ ಪ್ರಕಾರ ನಿಷೇಧಾಜ್ಞೆ ವಿಧಿಸುವಂತಹ ಅನಗತ್ಯ ಶ್ರಮವನ್ನು ಮಾನ್ಯ ನಿಜಾಮುದ್ದೀನ್ ತೆಗೆದುಕೊಳ್ಳುತ್ತಿದ್ದಾರೆ. ಶಾಂತಿಗೆ ಅಪಾಯವುಂಟಾಗುವಾಗ ಅದೂ ನಾಗರೀಕ ಹಕ್ಕುಗಳಿಗೆ ಉಂಟಾಗಬಹುದಾದ ಧಕ್ಕೆಯನ್ನು ಆದಷ್ಟೂ ಕನಿಷ್ಠಗೊಳಿಸುವಲ್ಲಿ ಎಚ್ಚರಿಕೆ ವಹಿಸಿ ಸೆಕ್ಷನ್ ಅನ್ನು ಜಾರಿಗೊಳಿಸಬೇಕಾಗುತ್ತದೆ. ಆದರೆ ನಿಜಾಮುದ್ದೀನ್ ಅವರಿಗೆ ಇವೊಂದು ತಿಳಿದಿರುವಂತೆ ತೋರುವುದಿಲ್ಲ.

ಈ ಹೊಸ ಶಿಸ್ತುಬದ್ಧ ಮನುಷ್ಯ ಕಮೀಷನರ್ ಆದ ನಂತರ ಬೆಂಗಳೂರಿನ ಹೆಚ್. ಎ. ಎಲ್. ಪ್ರದೇಶದಲ್ಲಿ ಮೂರು ಮಂದಿ ಕಾರ್ಮಿಕರು ಗುಂಡಿಗೆ ಬಲಿಯಾದರು. ಇತ್ತೀಚೆಗೆ ಕಬ್ಬನ್ ಪಾರ್ಕಿನಲ್ಲಿ ಅದೂ ರಾಜ್ಯ ಸೆಕ್ರೆಟಾರಿಯೇಟ್ ಭವನದ ಎದುರಿನಲ್ಲೇ ಕೆಲವು ಪೋಲೀಸರು ಮಹಿಳೆಯೊಬ್ಬಳ ಮಾನಭಂಗ ಮಾಡಿದರು. ದಿನಪತ್ರಿಕೆಗಳು, ರಾಜಕೀಯ ಪಕ್ಷಗಳ ಕಚೇರಿಗಳು, ಕಾರ್ಮಿಕ ಸಂಘಗಳ ಕಚೇರಿಗಳು ಹಾಗೂ ಪತ್ರಕರ್ತರು ತಮ್ಮ ರಕ್ಷಣೆಗೋಸ್ಕರ ಬದಲೀ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾಗಿದೆ. ಏಕೆಂದರೆ, ಪೋಲೀಸ್ ಶಕ್ತಿ ಕಾಂಗ್ರೆಸ್ (ಐ) ಗೂಂಡಾ ಪಡೆಯ ಚಮಚಾ ಆಗಿ ವರ್ತಿಸುತ್ತಿದೆ.

ನಿಜಾಮುದ್ದೀನ್ ಅಧಿಕಾರ ವಹಿಸಿಕೊಂಡಾಗಿನಿಂದಲೂ ಪೋಲೀಸರನ್ನು ನೆರೆ ರಾಜ್ಯಗಳಿಂದ ಕರೆಸಿಕೊಳ್ಳಲಾಗುತ್ತಿದೆ. ಗಡಿ ಭದ್ರತಾ ಪಡೆ ಮತ್ತು ಸಿ. ಆರ್. ಪಿ.ಗಳನ್ನೂ ಸಹ ಕರೆಸಿಕೊಳ್ಳುತ್ತಿದ್ದಾರೆ. ಈಗ ಬೆಂಗಳೂರಿನ ಜನ ಸ್ವಾತಂತ್ರ್ಯದಿಂದ ವಂಚಿತರಾಗಿ ಪೋಲೀಸ್ ಆಳ್ವಿಕೆಯಲ್ಲಿ ಬದುಕುತ್ತಿದ್ದಾರೆ.

ವಿಧಾನಸೌಧವನ್ನು ರಕ್ಷಿಸುತ್ತಿರುವ ವಿಧಾನವಂತೂ ತುಂಬಾ ವಿಚಿತ್ರವಾಗಿದೆ. ವಿಧಾನಸೌಧ ಹಲವಾರು ರಸ್ತೆಗಳನ್ನೂ ಎದುರಿಗೆ ದೊಡ್ಡ ಪಾರ್ಕನ್ನೂ ಹೊಂದಿದೆ. ಈ ರಸ್ತೆಗಳಲ್ಲಿ ವಾಹನಗಳು ಸಂಚರಿಸುವುದನ್ನು ನಿಷೇಧಿಸಿರುವುದೇ ಅಲ್ಲದೆ ಪಾದಚಾರಿಗಳೂ ಸಹ ಈ ರಸ್ತೆಯನ್ನು ಪ್ರವೇಶಿಸುವಂತಿಲ್ಲ.

ಕಾನೂನು ಹಾಗೂ ಶಿಸ್ತುಪಾಲನೆಯ ವಿಧಾನ ಅದರ ಗಂಭೀರ ಪರಿಣಾಮಗಳಿಂದಾಗಿ ಹಾಸ್ಯಕ್ಕೆ ಎಡೆಯಾಗುತ್ತಿದೆ. "ಶಾಂತವಾತಾವರಣವನ್ನು ನೆಲೆಗೊಳಿಸುವುದಕಾಗಿ ಅಳುತ್ತಿರುವ ಮಗುವನ್ನು ಕೊಲ್ಲಿರಿ" ಎಂಬುದೇ ಮಾನ್ಯ ನಿಜಾಮುದ್ದೀನರ ತತ್ವ ಎಂಬುದಾಗಿ ಬೆಂಗಳೂರಿನ ಜನ ಗೇಲಿ ಮಾಡುತ್ತಿದ್ದಾರೆ. ಜನರು ವಿಧಾನ ಸೌಧ ಪ್ರವೇಶಿಸುವುದನ್ನು ನಾಲ್ಕು ತಿಂಗಳಲ್ಲಿ ಎರಡು ಬಾರಿ ನಿಷೇಧಿಸಲಾಗಿದೆ. ಕೆಲವು ದಿನಗಳ ಹಿಂದೆ ಜೀವವಿಮಾ ನೌಕರರು ಮುಷ್ಕರದಲ್ಲಿದ್ದಾಗ ಸಿಲ್ವರ್‌ಜೂಬಿಲಿ ಪಾರ್ಕಿನಲ್ಲಿ ಸಭೆ ಸೇರಲು ಅನುಮತಿಯನ್ನು ನಿರಾಕರಿಸಲಾಗಿತ್ತು.

ಪೋಲೀಸ್ ಕಮೀಷನರ್‌ರವರ ಕಮ್ಯುನಿಸ್ಟ್ ವಿರೋಧೀ ಹಾಗೂ ಕಾರ್ಮಿಕ ವಿರೋಧೀ ದೃಷ್ಟಿಯನ್ನು ಎರಡು ಘಟನೆಗಳಿಂದ ಉದಾಹರಿಸಬಹುದು.

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಒಮ್ಮೆ ಮೈಕೋ ಕಾರ್ಮಿಕ ಸಂಘದ ಸರ್ವಸದಸ್ಯರ ಸಭೆ ನಡೆಸುವ ಅನುಮತಿ ಕೋರಿ ಕಮೀಷನರ್ ಅವರನ್ನು ಭೇಟಿ ಮಾಡಿದಾಗ ಕಮೀಷನರ್‌ರವರು ಕೂಡಲೇ ಈ ರೀತಿ ಪ್ರತಿಕ್ರಿಯಿಸಿದರು. "ನಿಮ್ಮಂತಹ ಜನರನ್ನು ನಾನು ಇಷ್ಟಪಡುವುದಿಲ್ಲ. ನೀವೆಲ್ಲಾ ರಾಜಕಾರಣಿಗಳು. ನಾನು ಟ್ರೇಡ್ ಯೂನಿಯನ್‌ಗಳನ್ನು ನಡೆಸುವ ಕಾರ್ಮಿಕರನ್ನು ಮಾತ್ರ ಇಷ್ಟಪಡುತ್ತೇನೆ". ಅವರು ಏನನ್ನು ಹೇಳಲು ಇಷ್ಟಪಟ್ಟಿದ್ದರೆಂದರೆ ಎಫ್. ಎಂ. ಖಾನ್‌ರಂತ ಜನರು ಟ್ರೇಡ್‌ಯೂನಿಯನ್ ಮುಖಂಡರಾಗುವುದು ತನಗೆ ತುಂಬಾ ಇಷ್ಟ ಎಂದು.

ಮತ್ತೊಂದು ಸಂದರ್ಭ ಕಾರ್ಮಿಕರೊಬ್ಬರು ಮೇ ದಿನಾಚರಣೆಗೆ ಅನುಮತಿ ಕೋರಲು ಹೋದಾಗ 'ಮೇ ದಿನ' ಎಂಬ ಪದ ಕಿವಿಗೆ ಬಿದ್ದೊಡನೆ ಅವರು ತಮ್ಮ ಮೇಲಿನ ನಿಯಂತ್ರಣವನ್ನೇ ಕಳೆದುಕೊಂಡು ಕಿರುಚಿದರು 'ನಾನು ಕಮ್ಯುನಿಸ್ಟರನ್ನು ದ್ವೇಷಿಸುತ್ತೇನೆ. ಅನುಮತಿ ಕೊಡಲು ಸಾಧ್ಯವಿಲ್ಲ. ಹೇಳು ನೀನು ಕಮ್ಯುನಿಸ್ಟ್ ಪಕ್ಷದ ಸದಸ್ಯನೇ'; 'ನನಗೆ ನಿಮ್ಮ ಸೂರ್ಯನಾರಾಯಣರಾವ್ ಗೊತ್ತು. ನಾನು ಮಾರ್ಕ್ಸ್‌ವಾದವನ್ನು ನಿನಗೆ ಹೇಳಿಕೊಡುತ್ತೇನೆ. ನಾನು ಅದನ್ನು ನಿಮ್ಮೆಲ್ಲರಿಗಿಂತ ಹೆಚ್ಚಾಗಿ ಕಲಿತಿದ್ದೇನೆ, ನಾನೊಬ್ಬ ಉತ್ತಮ ಲಾಯರ್ ಕೂಡ ಆಗಿದ್ದೇನೆ" ಮುಂತಾಗಿ ಸಾಗಿತ್ತು ಅವರ ಮಾತು. ಅನುಮತಿ ಕೋರಿಹೋಗಿದ್ದ ಕಾರ್ಮಿಕ ನಾನು ಸಭೆಗೆ ಕೇವಲ ನಿಮ್ಮ ಅನುಮತಿಯನ್ನಷ್ಟೇ ಬಯಸುತ್ತೇನೆ ಎಂದಾಗ ನಿಜಾಮುದ್ದೀನ್ ಸರ್ಕಲ್ ಇನ್ಸ್‌ಪೆಕ್ಟರರೊಬ್ಬರನ್ನು ಕರೆದು ಕಾರ್ಮಿಕನು ಅವಿಧೇಯನಾಗಿ ನಡೆದುಕೊಂಡಿದ್ದರಿಂದ ಆತನನ್ನು ಬಂಧಿಸಬೇಕೆಂದು ಅಪ್ಪಣೆ ಕೊಡಿಸಿದರು. ನಂತರ ಕಾರ್ಮಿಕನನ್ನು ಮಲ್ಲೇಶ್ವರಂ ಪೋಲೀಸ್ ಠಾಣೆಗೆ ಕರೆದೊಯ್ದು ಕಮೀಷನರ್ ಎದುರಿಗೆ ಅಗೌರವವಾಗಿ ನಡೆದುಕೊಂಡಿದ್ದಕ್ಕಾಗಿ ಕ್ಷಮಾಪಣಾ ಪತ್ರವನ್ನು ಆ ಕಾರ್ಮಿಕನಿಂದ ಬಲವಂತವಾಗಿ ಬರೆಸಿಕೊಳ್ಳಲಾಯಿತು.

ಕಮೀಷನರ್ ಅವರು ಒಬ್ಬ ಸಾರ್ವಜನಿಕ ಸೇವಕ. ಆತನ ಸಂಬಳ ಸರ್ಕಾರದ ಖಜಾನೆಯಿಂದ ಬರುತ್ತದೆ. ಅದು ರಾಜ್ಯದ ಎಲ್ಲಾ ತೆರಿಗೆದಾರರಿಂದ ತುಂಬಲಾಗುತ್ತದೆ ಮತ್ತು ಕಮೀಷನರ್ ಅವರು ರಾಜ್ಯದ ಜನತೆಗೆ ವಿಧೇಯರಾಗಿರಬೇಕು ಹೊರತು ಕುಖ್ಯಾತ ರಾಜಕಾರಣಿಗಳಿಗಲ್ಲ ಎಂಬುದನ್ನು ಮನವರಿಕೆಮಾಡಿಕೊಳ್ಳಬೇಕೆಂದು ಜನತೆ ಹೇಳುತ್ತಾ ಬರುತ್ತಿದ್ದಾರೆ. ಆದರೆ ಅವರು ಪಕ್ಷಪಾತೀ ಕಮೀಷನರ್ ಆಗಬೇಕೆಂದು ತೀರ್ಮಾನ ಮಾಡಿದ್ದರೆ ಕಮೀಷನರ್ ಹುದ್ದೆಗೆ ರಾಜೀನಾಮೆ ಕೊಟ್ಟು ಆಡಳಿತ ಪಕ್ಷ ಸೇರಿದರೆ ಕಾಂಗ್ರೆಸ್ (ಐ)ನ ಸೇವೆಯನ್ನು ಮತ್ತಷ್ಟು ಉತ್ತಮವಾಗಿ ನಿರ್ವಹಿಸಬಹುದು ಎಂಬುದಾಗಿ ಜನರು ಮಾತನಾಡಿಕೊಳ್ಳುತ್ತಿದ್ದಾರೆ.

●

ಯುವಜನ ಸಂಘಟನೆಯ ಸಮ್ಮೇಳನ

ಕುಂದಾಪುರ ತಾಲ್ಲೂಕಿನ ಯುವಜನ ಸಂಘಟನೆಯ ಪ್ರಥಮ ಸಮ್ಮೇಳನವು ಮೇ 24ರಂದು ಕುಂದಾಪುರದ ನೆಹರೂ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಜರುಗಿತು. ಡಿ.ವೈ.ಓ.ನ ದ. ಕ. ಜಿಲ್ಲಾ ಸಂಚಾಲಕ ಕಾಂ. ಬಿ. ಉಮಾನಾಥರು ಧ್ವಜಾರೋಹಣಗೈದರು. ಸಮ್ಮೇಳನವು ಕಾಂ. ವೆಂಕಟೇಶ್ ಕೋಣಿ, ಗಣೇಶ್ ಕಾರಂತ, ಶಂಕರ ಖಾರ್ವಿಯವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಿತು.

ಪ್ರಾರಂಭದಲ್ಲಿ ಹುತಾತ್ಮರಾದ ಬಾಬ್ಬಿ ಸ್ಯಾಂಡ್ಸ್ (ಐರ್ಲೆಂಡ್‌ನ ವಿಮೋಚನಾ ಹೋರಾಟಗಾರರ ಯುವನಾಯಕ) ಮತ್ತು ಅವರ ನಾಲ್ಕು ಜನ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಇವರ ಮರಣಕ್ಕೆ ಕಾರಣವಾದ ಬ್ರಿಟನ್ ಸರಕಾರವನ್ನು ಉಗ್ರವಾಗಿ ಖಂಡಿಸಲಾಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ. ದಾಸ್‌ಭಂಡಾರಿಯವರು ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮ್ಮೇಳನದ ಉದ್ಘಾಟಕರಾಗಿ ಆಗಮಿಸಿದ ಮಣಿಪಾಲದ ಜೂನಿಯರ್ ಕಾಲೇಜಿನ ಪ್ರಾಧ್ಯಾಪಕರಾದ ಡಾ॥ ಆರ್ಕೆಯವರು ಮಾತನಾಡುತ್ತಾ, "ಯುವಜನತೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಆರ್ಥಿಕ-ಸಾಮಾಜಿಕ ಪಿಡುಗುಗಳಿಗೆ ಕಾರಣವಾದ ಭೂಮಾಲಕ-ಬಂಡವಾಳಶಾಹಿ ಪದ್ಧತಿಯನ್ನು ಕಿತ್ತೊಗೆಯಲು ವ್ಯಾಪಕ ಚಳುವಳಿಗಳನ್ನು ಪ್ರಾರಂಭಿಸಲು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿ. ಕೆ. ಐತಾಳರು ಮಾತನಾಡುತ್ತಾ "ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯವು ಬಂದು ಅರ್ಥಹೀನವಾಗಿದೆ. ಯುವಜನತೆಯು ಉತ್ತಮ ಬದುಕಿಗಾಗಿ ಹೋರಾಟ ಮಾಡಬೇಕೆಂದು" ತಿಳಿಸಿದರು.

ಡಿ. ವೈ. ಓ.ನ ರಾಜ್ಯಸಮಿತಿಯ ಸಂಚಾಲಕ ಕಾಂ. ಶ್ರೀರಾಮ್‌ರೆಡ್ಡಿಯವರು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಾ ರಾಷ್ಟ್ರೀಯ, ಅಂತರಾಷ್ಟ್ರೀಯ ಯುವಜನತೆಯು ನಡೆಸಿದ ಹೋರಾಟದ ಬಗ್ಗೆ ವಿವರಿಸುತ್ತಾ, ಈ ಹೋರಾಟಗಳಿಂದ ಸ್ಫೂರ್ತಿಪಡೆಯಬೇಕೆಂದರು. ನಿರುದ್ಯೋಗವು ಬಂಡವಾಳಶಾಹಿಯ ಅನಿವಾರ್ಯ ಕೂಸು. ಆಳುವವರ್ಗವು ಸಂಘಟಿತ ಕಾರ್ಮಿಕರ ನ್ಯಾಯವಾದ ಹೋರಾಟಗಳನ್ನು ಹತ್ತಿಕ್ಕಲು ನಿರುದ್ಯೋಗಿ ಯುವಕರನ್ನು ಎತ್ತಿಕಟ್ಟುವ ಕುತಂತ್ರದ ಬಗ್ಗೆ ಜಾಗ್ರತರಿರಬೇಕೆಂದು ಒತ್ತಿಹೇಳಿದರು.

ಬೆಲೆ ಏರಿಕೆ, ದಲಿತರು ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆ, ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ, ನಿರುದ್ಯೋಗ ಸಮಸ್ಯೆ ಮುಂತಾದ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ಅದೇ ದಿನ ಸಾಯಂಕಾಲ ಯುವಜನರ ಬೃಹತ್ ರ್‍ಯಾಲಿಯ ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಶ್ರೀರಾಂರೆಡ್ಡಿ, ವೆಂಕಟೇಶ ಕೋಣಿ, ಕೆ. ರಾಮಚಂದ್ರ ಉಡುಪ, ಆನಂದ ಬಂಢಾರಿ ಇವರುಗಳು ಮಾತನಾಡಿದರು. ಕೊನೆಯಲ್ಲಿ ಕುಂದಾಪುರದ ಸಮುದಾಯ ಘಟಕವು ನಾಟಕ ಪ್ರದರ್ಶನವನ್ನೇರ್ಪಡಿಸಿತ್ತು.

ಸಮ್ಮೇಳನವು ಕಾಮ್ರೇಡ್ ಶಂಕರ ಖಾರ್ವಿ ಅಧ್ಯಕ್ಷರಾಗಿರುವ, ಉಪಾಧ್ಯಕ್ಷರಾಗಿ ಕಾಂ. ವೆಂಕಟೇಶ ಕೋಣಿ, ಕಾರ್ಯದರ್ಶಿಯಾಗಿ ವಿ. ಮಹಾಬಲ, ಸಹಕಾರ್ಯದರ್ಶಿಯಾಗಿ ಎಚ್. ನರಸಿಂಹ, ಕೋಶಾಧಿಕಾರಿಯಾಗಿ ಬಿ. ಗೋಪಾಲ ಶೆಟ್ಟಿಗಾರ ಇವರುಗಳಿರುವ ಹೊಸ ತಾಲ್ಲೂಕು ಸಮಿತಿಯನ್ನು ಚುನಾಯಿಸಿತು.

●

ಚಂದಾ ವಿವರ

ಬಿಡಿ ಪ್ರತಿ	:	60ಪೈಸೆ
6 ತಿಂಗಳಿಗೆ	:	15ರೂ.
ವಾರ್ಷಿಕ ಚಂದಾ	:	30ರೂ.

ವಿವಿಧ ವೇಷಗಳಲ್ಲಿ ಕೋಮುವಾದಿ ಶಕ್ತಿಗಳು

ದುಡಿಯುವವರ್ಗ ಮತ್ತು ಶ್ರಮಜೀವಿವರ್ಗದ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರುತ್ತಿರುವ ನಮ್ಮ ಆರ್ಥಿಕತೆಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮತ್ತು ಬಿಕ್ಕಟ್ಟಿನ ಹೊರೆಯನ್ನು ಸಾಮಾನ್ಯ ಮನುಷ್ಯನ ಮೇಲೆ ಹೇರುವ ಆಳುವವರ್ಗದ ಯತ್ನಗಳನ್ನು ಸೋಲಿಸಲು ಒಗ್ಗಟ್ಟಿನ ಪ್ರತಿರೋಧ ಬೇಕಾಗಿರುವ ಸಂದರ್ಭದಲ್ಲಿ ವಿಭಜಕ ಶಕ್ತಿಗಳು ತುಂಬ ಚಟುವಟಿಕೆಯಿಂದಿದ್ದು, ದುಡಿಯುವವರ್ಗ, ದುಡಿಯುವ ಜನತೆ ಮತ್ತು ರೈತಜನಾಂಗದ ಬೆಳೆಯುತ್ತಿರುವ ಒಗ್ಗಟ್ಟನ್ನು ಮುರಿಯುವ ಉದ್ದೇಶಗಳನ್ನು ಹೊಂದಿವೆ.

ಅಸ್ಸಾಂ ಜನತೆಯ ನಿಜವಾದ ತೊಂದರೆಗಳನ್ನು ಉಪಯೋಗಿಸಿಕೊಂಡು ಈಶಾನ್ಯ ಪ್ರದೇಶದಲ್ಲಿ ಪ್ರತ್ಯೇಕವಾದಿ ಚಳುವಳಿಗಳು ಬೆಳೆಯುತ್ತಿವೆ. ಸಾಮ್ರಾಜ್ಯಶಾಹಿ ಏಜೆನ್ಸಿಗಳು ಸಕ್ರಿಯವಾಗಿದ್ದು, ಕ್ರೈಸ್ತ ಮಿಷನ್‌ಗಳನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಳ್ಳುತ್ತಿವೆ. ವಿದೇಶದ ಒಂದು ಭಾಗದಲ್ಲಿ ದಂಗೆಕೋರರಿಗೆ ತರಬೇತಿ ಕೊಡಲಾಗುತ್ತಿದೆ.

ಹಳೆ ಘೋಷಣೆಗಳ ಪುನರುಜ್ಜೀವನ

ಕೋಮು ವಿಭಜನೆಯ ಹಳೆ ಸಾಮ್ರಾಜ್ಯಶಾಹಿ ಅಸ್ತ್ರದ ಮೇಲೆ ಧರ್ಮದ ವೇಷದಲ್ಲಿ ಇನ್ನೊಂದು ಪ್ರಚಾರ ಆರಂಭವಾಗಿದೆ. ಆರೆಸ್ಸೆಸ್, ಜಮಾತೆ ಇಸ್ಲಾಮಿ, ಕೆಲವು ಕ್ರೈಸ್ತ ಮಿಷನ್‌ಗಳು, ಅಕಾಲಿ ನಾಯಕತ್ವದ ಒಂದು ಭಾಗ ಇವೆಲ್ಲವೂ ಹಿಂದೂ ರಾಷ್ಟ್ರ, ಸಿಖ್‌ದೇಶ, ಖಾಲಿಸ್ತಾನ್, ಮುಸ್ಲಿಮ್ ದೇಶ ಇವುಗಳ ಕೂಗನ್ನು ಎಬ್ಬಿಸಿದ್ದಾರೆ. ಧರ್ಮದ ಆಧಾರದ ಮೇಲೆ ರಾಜ್ಯಗಳ ಸ್ಥಾಪನೆ ಆಗಲೆಂದು ಹೇಳುತ್ತಿದ್ದಾರೆ. ಈ ಘೋಷಣೆಗಳಿಗೆ ವಿದೇಶಿ ಪತ್ರಿಕೆಗಳಲ್ಲಿ ಒಳ್ಳೆಯ ಪ್ರಚಾರವೂ ಸಿಗುತ್ತಿದೆ. ಅರಬ್‌ದೇಶಗಳ ಅನೇಕ ಧಾರ್ಮಿಕ ನಾಯಕರು ನಮ್ಮ ದೇಶಕ್ಕೆ ಭೇಟಿ ಕೊಟ್ಟು ಕೋಮು ಭಾವನೆಗಳ ಕೆರಳಿಕೆಗೆ ತಮ್ಮ ಕಾಣಿಕೆಯನ್ನೂ ಕೊಡುತ್ತಿದ್ದಾರೆ. ಮೆಕ್ಕಾದ ಇಮಾಮರು ಶ್ರೀನಗರಕ್ಕೆ ಕಳೆದ ವರ್ಷ ಭೇಟಿ ಕೊಟ್ಟ ಮೇಲೆ ಜಮಾತೆ ಇಸ್ಲಾಮಿ ತನ್ನ ಚಟುವಟಿಕೆಗಳನ್ನು ಅನೇಕ ಪಟ್ಟು ಹೆಚ್ಚಿಸಿಕೊಂಡಿದೆ. ಅದರಂತೆ ಅಮೇರಿಕದಿಂದ ಗಂಗಾಸಿಂಗ್ ಧಿಲ್ಲಾನ್ ಭೇಟಿಕೊಟ್ಟ ಮೇಲೆ ಖಾಲಿಸ್ತಾನದ ಬೇಡಿಕೆ ಅಲ್ಲಲ್ಲಿ ಎದ್ದಿದೆ.

ವರ್ಗಹೋರಾಟವನ್ನು ತಡೆಗಟ್ಟಿ, ಶೋಷಕವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಲು ದುಡಿಯುವವರ್ಗವನ್ನು ಒಡೆಯಲು ಇವೆಲ್ಲ ನಡೆಯುತ್ತಿವೆ.

ಆರೆಸ್ಸೆಸ್ ಮತ್ತು ಬಿಜೆಪಿ

ದ್ವಂದ್ವ ಸದಸ್ಯತ್ವದ ಬಗ್ಗೆ ಜನತಾ ಪಕ್ಷದಲ್ಲಿ ಮೂರು ವರ್ಷ ಚರ್ಚೆ ನಡೆಯಿತು. ಇದು ಪಕ್ಷವನ್ನು ಒಡೆಯುವುದಕ್ಕೂ ಸಹಾಯಮಾಡಿತು. ಜನಸಂಘದ ನಾಯಕರು ಆರೆಸ್ಸೆಸ್ ಜೊತೆ ಸಂಬಂಧ ಕಳಚಿಕೊಳ್ಳಲು ನಿರಾಕರಿಸಿದರು. ಜನತಾ ಒಡೆದ ಮೇಲೆ ಜನಸಂಘವು ಬಿಜೆಪಿ ಹೆಸರಿನಲ್ಲಿ ಮುಂದುವರೆದಿದೆ. ಈಗ ಅದು ಗಾಂಧಿ ಸಮಾಜವಾದದ ಆದರ್ಶ ಹೊಂದಿದೆಯಂತೆ. ಆರೆಸ್ಸೆಸ್ ಜೊತೆ ಅದಕ್ಕೆ ಸ್ವಲ್ಪ ಭಿನ್ನಾಭಿಪ್ರಾಯಗಳಿವೆಯಂತೆ. ಆದರೆ ದ್ವಂದ್ವ ಸದಸ್ಯತ್ವದ ಪ್ರಶ್ನೆ ಬಂದಾಗ ಹಳೇಪಟ್ಟಿಗೇ ಅದು ಹಿಂತಿರುಗುತ್ತದೆ. ಆರೆಸ್ಸೆಸ್ ಸಾಂಸ್ಕೃತಿಕ ಸಂಘಟನೆಯಾದ್ದರಿಂದ ಬಿಜೆಪಿ ಸದಸ್ಯರು ಅದರಲ್ಲಿ ಇರಬಹುದೆಂದು ಇತ್ತೀಚೆಗೆ ಅದ್ವಾನಿ ಹೇಳಿದ್ದಾರೆ. ಆರೆಸ್ಸೆಸ್ಸಿನ ಮುಖವಾಣಿ 'ಆರ್ಗನೈಸರ್' ಬಿಜೆಪಿಯ ಪ್ರಚಾರ ಮಾಡುತ್ತಿದೆ. ಬಿಜೆಪಿ ನಾಯಕರು ಅದಕ್ಕೆ ಲೇಖನ ಬರೆಯುತ್ತಿದ್ದಾರೆ.

ಬಹಿರಂಗ ಪ್ರಚಾರ

ಹಿಂದೂ ರಾಷ್ಟ್ರ ಮತ್ತು ಹಿಂದೂ ದೇಶದ ಕಲ್ಪನೆಯನ್ನೇ ದೇವರಸ್ ಬಹಿರಂಗವಾಗಿ ಪ್ರಚಾರಮಾಡುತ್ತಿದ್ದಾರೆ. 'ಆರ್ಗನೈಸರ್'ನ ಏಪ್ರಿಲ್ 12ರ ಸಂಚಿಕೆಯ ಮೊದಲಲ್ಲೇ ಬಿರ್ಲಾ ಟಾಟಾರಿಗೆ ಅಭಿವಂದನೆ ಸೂಚಿಸಲಾಗಿದೆ. ಇದರಲ್ಲಿ ಸದಾಶಿವ ಸನ್ಯಾಲರ "ಹಿಂದು ಮತ್ತು ಹಿಂದೂ ಧರ್ಮ ಎಂದರೇನು" ಎಂಬ ಲೇಖನದಲ್ಲಿ ಕಮ್ಯುನಿಸ್ಟರು ಹಿಂದೂ ವಿರೋಧಿಗಳಷ್ಟೇ ಅಲ್ಲದೆ ಮುಸ್ಲಿಮ್ ವಿರೋಧಿ ಮತ್ತು ಕ್ರೈಸ್ತವಿರೋಧಿ ಎಂದು ಹೇಳಲಾಗಿದೆ.

ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ಸಾರ್ವಭೌಮ ಪ್ರಭುತ್ವ ಪಡೆದಾಗ ರಾಷ್ಟ್ರವಾಗುತ್ತದೆ ಎಂದು ಅದರಲ್ಲಿ ವರ್ಣಿಸಲಾಗಿದೆ. ಹಿಂದೂಗಳು ಒಂದು ರಾಷ್ಟ್ರವಾಗಿದ್ದರೂ ರಾಷ್ಟ್ರ-ಪ್ರಭುತ್ವ ಪಡೆಯಬೇಕಾಗಿದೆ. ಭಾರತ ಬಹುರಾಷ್ಟ್ರೀಯವಾಗಿದೆ. 1947ರಿಂದ ಅಧಿಕಾರದಲ್ಲಿರುವ ಲಿಬರಲ್ ಮಾನವತಾವಾದಿಗಳು ಹಿಂದೂಗಳನ್ನು ಶೋಷಿಸುತ್ತಿದ್ದಾರೆ. ಹಿಂದೂ ಧರ್ಮ ಒಂದು ಒಟ್ಟಾರೆ ಸಾಂಸ್ಕೃತಿಕ ವ್ಯವಸ್ಥೆ–ಇತ್ಯಾದಿ ಎಲ್ಲವೂ ಅದರಲ್ಲಿದೆ.

ಸಮಾನ ಪದಗಳು

ಆರ್ಗನೈಸರ್‌ನ ಏಪ್ರಿಲ್ 1 ರ ಸಂಚಿಕೆಯಲ್ಲಿಯೂ ಬಾಳಾಸಾಹೇಬ್ ದೇವರಸರ ಭಾಷಣವಿದೆ. ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಅವರು ಅದರಲ್ಲಿ ವಿವರವಾಗಿ ತಿಳಿಸಿದ್ದಾರೆ. 'ಭಾರತೀಯ ರಾಷ್ಟ್ರ'ಕ್ಕಿಂತ 'ಹಿಂದೂ ರಾಷ್ಟ್ರ' ಎಂಬ ಪದವೇ ಹೆಚ್ಚು ಸರಿ ಎಂದು ಅವರು ವಾದಿಸಿದ್ದಾರೆ. 'ಭಾರತೀಯ ರಾಷ್ಟ್ರ' ಎಂಬ ಪದ ಬಳಸುವುದರಿಂದ ಕೋಮು ಭಾವನೆ ಇಲ್ಲವಾಗಬಹುದು ಎಂದು ಕೆಲವರು ಹೇಳಬಹುದು. ಆದರೆ ಜನರ ಮನಸ್ಸಿನಲ್ಲಿರುವ ದೃಷ್ಟಿಕೋನ ಅಳಿಸಲು ಸಾಧ್ಯವೇ ಎಂದು ದೇವರಸ್ ಕೇಳುತ್ತಾರೆ.

ಹಿಟ್ಲರನ ಜನಾಂಗೀಯ ಭಾವನೆಗಳನ್ನು ಗೋಲ್ವಾಲ್ಕರ್ ಪ್ರಶಂಸಿಸಿದ್ದರು. ಹಿಟ್ಲರನ ಹೆಜ್ಜೆಗಳನ್ನು ಅನುಸರಿಸಿ ಧಾರ್ಮಿಕ ಅಲ್ಪಸಂಖ್ಯಾತರು

ಹರಿಕಿಷನ್ ಸಿಂಗ್ ಸುರ್ಜಿತ್

ಪೌರತ್ವ ಕೂಡಾ ಇಲ್ಲದೆ ಎರಡನೇ ದರ್ಜೆಯವರಾಗಿರಬೇಕು ಎಂದು ಅವರು ಹೇಳಿದ್ದರು. ಹಿಂದೂಗಳು ಮಾತ್ರ ಭಾರತೀಯರು, ಮಿಕ್ಕವರೆಲ್ಲ ವಿದೇಶಿಯರು. ಅವರಿಗೆ ಪೌರತ್ವ ಕೊಡಬಾರದು, ಇಲ್ಲವೆ ಅಟ್ಟಬೇಕು ಎಂದೂ ಗೋಲ್ವಾಲ್ಕರ್ ಹೇಳಿದ್ದರು. ದೇಶದ ಎಲ್ಲ ಕೋಮುಗಳನ್ನೂ ಆದರಿಸುವ ಭಾರತೀಯ ರಾಷ್ಟ್ರೀಯತೆಯನ್ನು ಅವರು ಕೀಳುಗಳೆದು ಬರೆದಿದ್ದರು.

ಹಿಂದೂ ಸಮಾಜಕ್ಕೆ ಒತ್ತಾಯ

ಗೋಲ್ವಾಲ್ಕರ್ ಪ್ರಕಾರ, ಹಿಂದೂ ರಾಜ್ಯ ಸ್ಥಾಪನೆಯಾದರೆ ಮಾತ್ರ ಭಾರತ ಸ್ವತಂತ್ರವಾಗುತ್ತದೆ. ಹಿಂದೂ ಸಾರ್ವಭೌಮ ರಾಷ್ಟ್ರದ ಸ್ಥಾಪನೆದಿನ ಮಾತ್ರ ನಮ್ಮ ಸ್ವಾತಂತ್ರ್ಯದಿನ ಆಗುತ್ತದೆ.

ಜಾತಿಪದ್ಧತಿಯ ಬಗ್ಗೆ ಇರುವ ಎಲ್ಲ ಮತಾಂಧ ಪರಿಕಲ್ಪನೆಗಳನ್ನೂ ಕೂಡ ಗೋಲ್ವಾಲ್ಕರ್ ಎತ್ತಿಹಿಡಿದಿದ್ದರು. ಇವುಗಳು ಆರೆಸ್ಸೆಸ್ ವಾದಗಳು, ಅಪಾಯಕಾರಿ ಸಿದ್ಧಾಂತಗಳು ಎಂದು ತಳ್ಳುವುದು ಕಷ್ಟವೇನಲ್ಲ. ಇಸ್ಲಾಮಿ ಮೂಲಭೂತವಾದಂಥ ಇದಕ್ಕೆ ಸಮಾನವಾದಗಳು ಈಗ ಇಸ್ಲಾಮಿ ಜಗತ್ತಿನಲ್ಲಿ ತಲೆಎತ್ತುತ್ತಿವೆ.

ವಿವಿಧ ದೇಶಗಳಲ್ಲಿ ಬೆಳೆಯುತ್ತಿರುವ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಒಡೆಯಲು, ಧರ್ಮದ ಹೆಸರಿನಲ್ಲಿ ಜನರಲ್ಲಿ ಒಡಕುಂಟುಮಾಡಲು ಈ ಪರಿಕಲ್ಪನೆಗಳು ಉದ್ದೇಶಿಸಿವೆ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಯಾವ ತಂತ್ರ ಅನುಸರಿಸಿದರೋ ಅದನ್ನೇ ಇವೂ ಅನುಸರಿಸುತ್ತವೆ. ಅಂದು, ಬ್ರಿಟಿಷರು ಎರಡು ದೇಶಗಳ (ದ್ವಿರಾಷ್ಟ್ರ) ಸಿದ್ಧಾಂತವನ್ನು ಪ್ರೋತ್ಸಾಹಿಸಿ, ಪಾಕಿಸ್ತಾನವನ್ನು ಸೃಷ್ಟಿಸಿದರು. ಸಿಖ್ಖರಿಗೂ ಪ್ರತ್ಯೇಕ ರಾಷ್ಟ್ರಮಾಡಲು ಪ್ರಯತ್ನಿಸಿದರು. ರಾಷ್ಟ್ರೀಯ ಐಕ್ಯತೆಯನ್ನು ಒಡೆಯಲು ಹಿಂದೂ ಕೋಮುವಾದಿ ಅಂಶಗಳನ್ನು ಪ್ರೋತ್ಸಾಹಿಸಿದರು.

ಬಾಳಾಸಾಹೇಬ ದೇವರಸ್ ಮತ್ತು ಆರೆಸ್ಸೆಸ್‌ಗಳು ದೊಡ್ಡ ಏಕಸಾಮ್ಯದಾರರ ಮತ್ತು ವ್ಯಾಪಾರಿಗಳ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನ ಪಡುತ್ತಿದ್ದಾರೆ. ನಮ್ಮ ದೇಶದ ಆಳುವವರ್ಗಗಳು ಊಳಿಗಮಾನ್ಯತೆ ಮತ್ತು ಸಾಮ್ರಾಜ್ಯಶಾಹಿಗಳ ಮೈತ್ರಿಯ ಜೊತೆ ಅನುಸರಿಸುತ್ತಿರುವ ಬಂಡವಾಳಶಾಹಿ ಮಾರ್ಗದ ವಿರುದ್ಧ ಬೆಳೆಯುತ್ತಿರುವ ಐಕ್ಯಪ್ರತಿರೋಧವನ್ನು ತಡೆಯಲು ಕೋಮುದ್ವೇಷ ಹರಡುತ್ತಿದ್ದಾರೆ. ವಿವಿಧ ವೇಷಗಳಲ್ಲಿ ಏಳುತ್ತಿರುವ ಮತೀಯ ಮೂಲಭೂತವಾದವನ್ನು ವಿರೋಧಿಸಿ ಹೋರಾಡಲು ಸಾಧ್ಯವಾಗದಿದ್ದರೆ ಎಡ ಪ್ರಜಾಪ್ರಭುತ್ವವಾದಿ ಶಕ್ತಿಗಳು ಮುಂದುವರೆಯುವುದಿಲ್ಲ.

(ಸಶೇಷ)

ಮಿಲಿಯ ಸದಸ್ಯತ್ವಕ್ಕೆ ಎಸ್.ಎಫ್.ಐ. ಕೇಂದ್ರ ಸಮಿತಿ ಕರೆ

ಏಪ್ರಿಲ್ 20ರಿಂದ 24ರ ವರೆಗೆ ನಾಲ್ಕು ದಿನಗಳ ಕಾಲ ಕಲ್ಕತ್ತೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಕೇಂದ್ರ ಸಮಿತಿಯ ಸಭೆಯು ಜರುಗಿತು. ಹತ್ತೊಂಬತ್ತು ರಾಜ್ಯಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಮಹತ್ವಪೂರ್ಣ ಸಭೆಯಲ್ಲಿ ಕೆಳಕಂಡ ತೀರ್ಮಾನಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಾಲ್ಕನೇ ಅಖಿಲ ಭಾರತ ಸಮ್ಮೇಳನ :

ಎಸ್. ಎಫ್. ಐ. ನಾಲ್ಕನೇ ಅಖಿಲ ಭಾರತ ಸಮ್ಮೇಳನವನ್ನು 1982ರ ಜನವರಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು. ಸಮ್ಮೇಳನದ ಸ್ಥಳವನ್ನು ಮತ್ತು ದಿನಾಂಕವನ್ನು ಅಂತಿಮವಾಗಿ ನಿರ್ಧರಿಸಲು ಕಾರ್ಯದರ್ಶಿ ಮಂಡಳಿಗೆ ಅಧಿಕಾರ ನೀಡಲಾಗಿದೆ. ರಾಷ್ಟ್ರದ ಕೆಲವು ಭಾಗಗಳಲ್ಲಿ ಅಶಾಂತಿಯುತ ವಾತಾವರಣವಿದ್ದಾಗ್ಯೂ 1980ರಲ್ಲಿ ಎಸ್. ಎಫ್. ಐ. ಸದಸ್ಯತ್ವವು ಐದು ಲಕ್ಷವನ್ನು ಮೀರಿದೆ. ನಾಲ್ಕನೇ ಸಮ್ಮೇಳನವನ್ನು ಒಂದು ಮಿಲಿಯ ಸದಸ್ಯರ ಸಮ್ಮೇಳನವನ್ನಾಗಿ ಮಾಡಬೇಕೆಂದು ಕೇಂದ್ರ ಸಮಿತಿಯು ಕರೆನೀಡಿದೆ. 1981ರಲ್ಲಿ ಹತ್ತು ಲಕ್ಷ ಸದಸ್ಯರನ್ನು ನೊಂದಾಯಿಸುವ ಕಾರ್ಯವನ್ನು ಯಶಸ್ವಿಗೊಳಿಸಲು ಎಲ್ಲ ರಾಜ್ಯಗಳ ಕಾರ್ಯಕರ್ತರೂ ಶ್ರಮಿಸಬೇಕೆಂದು ಕೇಂದ್ರ ಸಮಿತಿ ವಿನಂತಿಸಿದೆ.

'ಉದ್ಯೋಗ' 'ಶಿಕ್ಷಣ'ಕ್ಕಾಗಿ ಹೋರಾಟ :

ವಿದ್ಯಾರ್ಥಿ-ಯುವಜನತೆಯನ್ನು ಬಾಧಿಸುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತು ಕೆಲವು ಮುಖ್ಯ ಶೈಕ್ಷಣಿಕ ಬೇಡಿಕೆಗಳಿಗಾಗಿ ರಾಷ್ಟ್ರವ್ಯಾಪಿಯಾದ ಐಕ್ಯಹೋರಾಟವನ್ನು ಸಂಘಟಿಸಲು ಎಸ್. ಎಫ್. ಐ. ಕೇಂದ್ರಸಮಿತಿಯು ತೀರ್ಮಾನಿಸಿದೆ. ಐಕ್ಯಕಾರ್ಯಾಚರಣೆಯ ಸಂಬಂಧದಲ್ಲಿ ಈಗಾಗಲೇ ಸಮಾನದೃಷ್ಟಿಕೋನವುಳ್ಳ ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಕೇಂದ್ರಮಟ್ಟದಲ್ಲಿ ಮೊದಲ ಸುತ್ತಿನ ಮಾತುಕತೆ ನಡೆಸಲಾಗಿದೆ. ಚಳುವಳಿಯ ರೂಪರೇಷೆಗಳ ಬಗ್ಗೆ ಜಂಟಿಯಾಗಿ ನಿರ್ಧರಿಸಲಾಗುವುದು.

ಸೌಹಾರ್ದ ಮಾತುಕತೆಗಾಗಿ ಮಾಸ್ಕೋ ಪ್ರವಾಸ :

ಸೋವಿಯೆತ್ ರಷ್ಯಾದ ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಸೌಹಾರ್ದ ಮಾತುಕತೆ ನಡೆಸಲು ಜೂನ್ ತಿಂಗಳಲ್ಲಿ ಮಾಸ್ಕೋಗೆ ಭೇಟಿಕೊಡಲು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳನ್ನು ಆಹ್ವಾನಿಸಲಾಗಿದೆ. ನಾಲ್ಕು ಪ್ರತಿನಿಧಿಗಳ ಈ ತಂಡದಲ್ಲಿ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಉಮಾಮಹೇಶ್ವರ ರಾವ್ ಮತ್ತು ಕೇಂದ್ರಸಮಿತಿ ಸದಸ್ಯರಾದ ಕಾಂ. ಪಿ. ಶಶಿಯವರನ್ನು ಎಸ್. ಎಫ್. ಐ. ಪರವಾಗಿ ಕಳುಹಿಸಲು ಕೇಂದ್ರಸಮಿತಿಯು ನಿರ್ಧರಿಸಿತು. ಡಿ. ವೈ. ಎಫ್. ಐ.ನ ಇಬ್ಬರು ಪ್ರತಿನಿಧಿಗಳ ಪೈಕಿ ಕರ್ನಾಟಕ ರಾಜ್ಯದಿಂದ ಕಾಂ. ಶ್ರೀರಾಮರೆಡ್ಡಿಯವರು ಒಬ್ಬರಾಗಿರುತ್ತಾರೆ.

ಈ ತಂಡದವರೆಲ್ಲರಿಗೂ ಎಸ್. ಎಫ್. ಐ. ರಾಜ್ಯಸಮಿತಿಯು ತನ್ನ ಶುಭಾಶಯ ಕೋರಿದೆ.

●

ಎಲ್ ಸಾಲ್ವಡೋರ್ : ಅಮೇರಿಕನ್ ಸಾಮ್ರಾಜ್ಯಶಾಹೀ ನೀಚತನ ಮುಂದುವರಿಯುತ್ತಿದೆ

ದಕ್ಷಿಣ ಅಮೇರಿಕಾದ ದೇಶ ಎಲ್‌ಸಾಲ್ವಡೋರ್‌ನ ಮಿಲಿಟರಿ ಸರಕಾರ ಕಳೆದ ವರ್ಷ ಹತ್ತು ಸಾವಿರದಷ್ಟು ಜನರ ಕೊಲೆ ಮಾಡಿತ್ತು. 1979ರಲ್ಲಿಯೂ 8000ದಷ್ಟು ಜನರ ಕೊಲೆಯಾಗಿತ್ತು. ಈ ವರ್ಷ ಈಗಾಗಲೇ 5156 ಜನರ ಕೊಲೆಯಾಗಿದೆಯೆಂದು ಸಾನ್‌ಸಾಲ್ವಡೋರ್‌ನ ಆರ್ಚ್‌ಬಿಷಪ್ ಕಾರ್ಯಾಲಯದ ಕಾನೂನು ಸಹಾಯ ವಿಭಾಗ ತಿಳಿಸಿದೆ. (ಈ ವಿಭಾಗದ ಕಚೇರಿಗಳು ಆಗಾಗ ಬಲಪಂಥೀಯ ಭಯೋತ್ಪಾದಕರ ವಿಧ್ವಂಸಕಾರೀ ಆಕ್ರಮಣಗಳಿಗೆ ಒಳಗಾಗಿವೆ). ಎಲ್ ಸಾಲ್ವಡೋರ್‌ನ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ ಹಲವು ಪಕ್ಷಗಳು ಹಾಗೂ ಗೆರಿಲ್ಲಾ ಸಂಘಟನೆಗಳಿಂದೊಡಗೂಡಿದ ಫಾರಾಬುಂದೋ ಮಾರ್ತಿ ರಾಷ್ಟ್ರೀಯ ವಿಮೋಚನಾ ರಂಗ ತನ್ನ ಒಂದು ಹೇಳಿಕೆಯಲ್ಲಿ ನೆಪೋಲಿಯನ್ ದ್ವಾರ್ತೆಯ ನೇತೃತ್ವದ ಎಲ್ ಸಾಲ್ವಡೋರ್‌ನ ಮಿಲಿಟರಿ ಸರಕಾರ ಈಗ ತನ್ನ ಸೈನಿಕ ಕಾರ್ಯಾಚರಣೆಗಳಲ್ಲಿ ಹಸುಳೆಗಳನ್ನೂ ಹಾಗೂ ಮಕ್ಕಳನ್ನೂ ನಿರ್ನಾಮ ಮಾಡುತ್ತಿದೆಯೆಂದು ತಿಳಿಸಿದೆ.

ಎಡಪಂಥೀಯರೊಂದಿಗೆ ಯಾವುದೇ ರೀತಿಯ ಸಂಬಂಧ ಪಡೆದಿದ್ದಾರೆಯೆಂಬ ಸಂಶಯಕ್ಕೆ ಅಥವಾ ಊಹೆಗೆ ಒಳಗಾದವರೆಲ್ಲಾ ಬಲಪಂಥೀಯರ ಹಿಂಸಾಚಾರಕ್ಕೆ ತಪ್ಪದೇ ಗುರಿಯಾಗುತ್ತಿದ್ದಾರೆ. ಕಟುಕರಂತೆ ಅಲೆದಾಡುವ ಈ ಬಲಪಂಥೀಯ ಕೊಲೆಗಾರರ ಹೆದರಿಕೆಯಿಂದಾಗಿ ಹಲವರು ತಮ್ಮ ಮನೆ-ಮಾರು ಬಿಟ್ಟು ಓಡಿ ಹೋಗಲಾರಂಭಿಸಿದ್ದಾರೆ; ನಿರಾಶ್ರಿತರ ಶಿಬಿರಗಳೆಡೆಗೆ ಪರಾರಿಯಾಗುತ್ತಿದ್ದಾರೆ. ಇಂತಹ ಕೆಲವು ಶಿಬಿರಗಳಲ್ಲಿ ಸಾವಿರಕ್ಕಿಂತಲೂ ಹೆಚ್ಚು ಸಂಖ್ಯೆಯ ಜನರಿದ್ದಾರೆ. ಇವರಲ್ಲಿ ಮಕ್ಕಳ ಸಂಖ್ಯೆಯೇ ಹೆಚ್ಚು. ತಿನ್ನಲು ಆಹಾರ, ಉಡಲು ಬಟ್ಟೆಯ ಸರಿಯಾದ ವ್ಯವಸ್ಥೆಯಂತೂ ಈ ಶಿಬಿರಗಳಲ್ಲಿ ಇಲ್ಲವೇ ಇಲ್ಲ.

ಸಾಮ್ರಾಜ್ಯಶಾಹಿಯ ನೀಚತನ

ಜನತೆಯ ವಿಮೋಚನಾ ಹೋರಾಟಗಳನ್ನು ಬಗ್ಗು ಬಡಿಯಲು ಆಯಾಯ ದೇಶಗಳ ಸರಕಾರಗಳಿಗೆ ಸೈನಿಕ ಬೆಂಬಲ ಕೊಡುವುದು ಸಾಮ್ರಾಜ್ಯಶಾಹಿಗಳ ಅದರಲ್ಲೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರದ ನೀತಿಯೇ ಆಗಿದೆ. ಎಲ್‌ಸಾಲ್ವಡೋರ್‌ನ ಜನತೆಯ ವಿಮೋಚನಾ ಹೋರಾಟವೂ ಇದಕ್ಕೆ ಹೊರತಾಗಿರಲಿಲ್ಲ. 1979ರಲ್ಲಿ 8000 ಹಾಗೂ 1980ರಲ್ಲಿ 10,000 ಜನರನ್ನು ಸಾಯಿಸಲು ಮಿಲಿಟರಿ ಸರ್ವಾಧಿಕಾರಿ ನೆಪೋಲಿಯನ್ ದ್ವಾರ್ತೆಗೆ ಸಂಪೂರ್ಣ ಸಹಾಯ ಒದಗಿಸಿದ್ದು ಅಮೇರಿಕನ್ ಸಾಮ್ರಾಜ್ಯಶಾಹಿ. ಇದುವರೆಗಿನ ಅಮೇರಿಕನ್ ಸರಕಾರಗಳು ಇಂತಹ ಸಹಾಯವನ್ನು "ಮಾನವ ಹಕ್ಕುಗಳ ರಕ್ಷಣೆ"ಗಾಗಿ ತನ್ನ ಸಹಾಯ ಎಂಬ ಹೆಸರಲ್ಲಿ ನೀಡುತ್ತಿತ್ತು. ರೀಗನ್ ಸರಕಾರ ಈಗ ಅಮೇರಿಕ ಸಂಯುಕ್ತ ಸಂಸ್ಥಾನಗಳ ಸರಕಾರದ ಈ ಸೋಗಿನ ವೇಷವನ್ನೂ ಕಿತ್ತೆಸೆದು ನೇರವಾಗಿಯೇ ವಿಮೋಚನಾ ಹೋರಾಟಗಳನ್ನು ಮುರಿಯುವ ತನ್ನ ಉದ್ದೇಶವನ್ನು ಸಾರುತ್ತದೆ. ವಿಮೋಚನಾ ಹೋರಾಟ ಬಹಳಷ್ಟು ತೀವ್ರವಾಗಿರುವ ಎಲ್ ಸಾಲ್ವಡೋರ್‌ನಲ್ಲಿ ತನ್ನ ಈ ಹೊಸ ಆಕ್ರಮಣಕಾರೀ ಹಾಗೂ ಯುದ್ಧಕೋರ ಧೋರಣೆಯನ್ನು ರೀಗನ್ ಸರಕಾರ ಜಾರಿಗೆ ತರುತ್ತಿದೆ.

ರೀಗನ್ ಅಧಿಕಾರವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಅಮೇರಿಕದ ಸರಕಾರ 25 ಮಿಲಿಯ ಡಾಲರ್‌ಗಳ ಸೈನಿಕ ಸಹಾಯವನ್ನು ಎಲ್ ಸಲ್ವಾಡೋರ್‌ನ ಮಿಲಿಟರಿ ಸರ್ವಾಧಿಕಾರಿಗೆ ಮಂಜೂರು ಮಾಡಿತು. ತಕ್ಷಣ ಆ ಸರ್ವಾಧಿಕಾರಿ ಸಾಮೂಹಿಕ ನರ ನರಹತ್ಯೆಯ ತನ್ನ ಕಾರ್ಯಾಕ್ರಮವನ್ನು ಇನ್ನಷ್ಟು ತೀವ್ರಗೊಳಿಸಿದ್ದಾನೆ. ಆತನ ಸರ್ವಾಧಿಕಾರೀ ಸರಕಾರಕ್ಕೆ ರೀಗನ್ ವಿಜಯದಿಂದ ಎಷ್ಟೊಂದು ಸಂತಸವಾಗಿದೆಯೆಂದರೆ ಬಲಪಂಥೀಯ ಕೊಲೆಗಾರ ತಂಡಗಳಿಗೆ ಆ ಸರಕಾರ ಜನರ ಹತ್ಯೆ ನಡೆಸಲು ಸಂಪೂರ್ಣ ಸ್ವಾತಂತ್ರ್ಯ ಕೊಟ್ಟುಬಿಟ್ಟಿದೆ. 20 ಸಾವಿರ ಚದರ ಕಿಲೋಮೀಟರ್ ಪ್ರದೇಶದಲ್ಲಿ ವ್ಯಾಪಿಸಿದ 50ಲಕ್ಷ ಜನರಿರುವ ಎಲ್‌ಸಾಲ್ವಡೋರ್ ಈಗ ಅಮೇರಿಕಾದ ಕಮ್ಯುನಿಸ್ಟ್-ವಿರೋಧೀ ಧೋರಣೆಯ ಪ್ರಯೋಗಾಲಯದಂತಾಗಿ ಬಿಟ್ಟಿದೆ.

ರೀಗನ್ ಸರಕಾರದ ಇತ್ತೀಚಿನ 25 ಮಿಲಿಯ ಡಾಲರ್ ಮಿಲಿಟರಿ ಸಹಾಯದ ಪ್ರಕಾರ ಈಗ ಪ್ರತಿದಿನ ಎಲ್‌ಸಾಲ್ವಡೋರ್‌ಗೆ ಶಸ್ತ್ರಾಸ್ತ್ರಗಳನ್ನು ವಿಮಾನಗಳ ಮೂಲಕ ಕಳಿಸಲಾಗುತ್ತಿದೆ. ವಿಮೋಚನಾ ಹೋರಾಟಗಾರರ ವಿರುದ್ಧ ಉಪಯೋಗಿಸುವ ಅಮೇರಿಕನ್ ಹೆಲಿಕಾಪ್ಟರ್ ಪಡೆಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಸುಮಾರು 2000 ಸೈನಿಕರಿರುವ ವಿಶೇಷ ಸೈನಿಕ ಪಡೆಯನ್ನು ಕಟ್ಟಲು ಸಹಾಯ ಒದಗಿಸಲಾಗುತ್ತಿದೆ; ಅಮೇರಿಕನ್ 'ಸಲಹೆಗಾರರ ಸಂಖ್ಯೆಯನ್ನು 54ಕ್ಕೇರಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ಎಲ್ ಸಾಲ್ವಡೋರ್‌ನ ಸೈನಿಕ ಅಧಿಕಾರಿಗಳ ಹತ್ತರಲ್ಲಿ ಒಂದಂಶದಷ್ಟಾಗುತ್ತದೆ. ಅಲ್ಲದೆ ನಿಜವಾದ 'ಸಲಹೆಗಾರ'ರ ಸಂಖ್ಯೆ ಇನ್ನೂ ಹೆಚ್ಚಿದೆ. ಬಿ.ಬಿ.ಸಿ.ಯ ಒಂದು ವರದಿಯಿಂದ ಈ ಸಂಖ್ಯೆ ಕನಿಷ್ಟ 134 ಇದೆಯೆಂದು ತಿಳಿದುಬರುತ್ತದೆ.

ಯುದ್ಧಕೋರ ನೀತಿಗೆ ವ್ಯಾಪಕ ವಿರೋಧ

ಅಮೇರಿಕನ್ ಸಾಮ್ರಾಜ್ಯಶಾಹಿಯ ಕೆಲವು ಕೈಗೊಂಬೆ ಸರಕಾರಗಳನ್ನು ಬಿಟ್ಟರೆ ಅಮೇರಿಕಾದ ಒಳಗಡೆ ಹಾಗೂ ಹೊರಗೆ ಎಲ್ಲೆಡೆಯಿಂದಲೂ ಅಮೇರಿಕನ್ ಸರಕಾರದ ಈ ಆಕ್ರಮಣ ನೀತಿಗೆ ತೀವ್ರ ವಿರೋಧ ಏರ್ಪಟ್ಟಿದೆ. ಇದರಿಂದಾಗಿಯೇ ಅಮೇರಿಕನ್ ಸರಕಾರ ಪರೋಕ್ಷ ವಿಧಾನಗಳಿಂದ ತನ್ನ ಯುದ್ಧಕೋರ ನೀತಿಯನ್ನು ಮುಂದುವರೆಸುತ್ತಿದೆ.

ಅಮೇರಿಕಾ ಸಂಯುಕ್ತ ಸಂಸ್ಥಾನ ಹಲವು ರಾಜಕಾರಣಿಗಳು ಹಿಂದೆ ಕಾರ್ಟರ್ ಹಾಗೂ ಈಗ ರೀಗನ್ ಸರಕಾರ ತನ್ನ 'ನೀತಿಯ ಸಮರ್ಥನೆಗಾಗಿ ಕೊಡುವ ಕಾರಣಗಳಿಂದ ಸಮಾಧಾನ ಹೊಂದಿಲ್ಲ. ಹಲವು ಸೆನೇಟರುಗಳು ಎಲ್ ಸಾಲ್ವಡೋರ್ ವಿಷಯದಲ್ಲಿ ತಮ್ಮ ದೇಶ ಎಷ್ಟರವರೆಗೆ ಸೇರಿಕೊಂಡಿದೆ ಹಾಗೂ ಅಲ್ಲಿ ಬಲಪಂಥೀಯ ಭಯೋತ್ಪಾದಕರಿಗೆ ಎಷ್ಟರ ಮಟ್ಟಿಗೆ ಆರ್ಥಿಕ ನೆರವು ಕೊಡುತ್ತಿದೆ ಎಂಬುದರ ಬಗ್ಗೆ ರೀಗನ್ ಸರಕಾರದಿಂದ ಸ್ಪಷ್ಟೀಕರಣ ಕೇಳಿದ್ದಾರೆ. ಅಮೇರಿಕನ್ ಸೈನಿಕರಿಂದಾಗಿ "ಇನ್ನೊಂದು ವಿಯೆಟ್ನಾಂ ಉಂಟುಮಾಡಬಹುದು ಅಥವಾ ಅಲ್ಲಿಂದ ಮುಖಭಂಗ ಮಾಡಿಸಿಕೊಂಡು ವಾಪಸು ಬರಬೇಕಾಗಬಹುದು" ಎಂದು 44 ಸೆನೇಟರುಗಳು ಸಹಿ ಹಾಕಿದ ಟೆಲಿಗ್ರಾಂ ಅಧ್ಯಕ್ಷ ರೀಗನ್‌ಗೆ ಕಳಿಸಲಾಗಿದೆ. ಇಬ್ಬರು ಡೆಮೊಕ್ರಾಟ್ ಪಕ್ಷದ ಸೆನೇಟರುಗಳು ಸೆನೇಟ್‌ನಲ್ಲಿ ಮಂಡಿಸಿದ ಮಸೂದೆಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನ ಎಲ್ ಸಾಲ್ವಡೋರ್‌ಗೆ ಕೊಡುವ ಎಲ್ಲಾ ಸೈನಿಕ ಸಹಾಯವನ್ನು ರದ್ದುಗೊಳಿಸಬೇಕು ಹಾಗೂ ಅಮೇರಿಕನ್ "ಸಲಹೆಗಾರ"ರನ್ನು ವಾಪಸು ಕರೆಸಿಕೊಳ್ಳಬೇಕೆಂದು ಕರೆಕೊಡಲಾಗಿದೆ. ಆದರೆ ಈ ಬಗ್ಗೆ ಡೆಮಾಕ್ರೇಟ್ ಪಕ್ಷದಲ್ಲೇ ಒಮ್ಮತವಿಲ್ಲವಾದ್ದರಿಂದ ಮಸೂದೆ ಅಂಗೀಕಾರವಾಗುವ ಸಂಭವವಿಲ್ಲ.

"ಈ ಹತ್ಯಾಕಾರ್ಯದಲ್ಲಿ ಸಹಯೋಗಿಗಳಾಗುತ್ತೀರಾ?"

ಅಮೇರಿಕಾದ ಧೋರಣೆಗೆ ಅತೀ ತೀಕ್ಷ್ಣವಾದ ಟೀಕೆ ಬಂದಿರುವುದು ಎಲ್‌ಸಾಲ್ವಡೋರ್‌ನಲ್ಲಿ ಹಿಂದೆ ಅಮೇರಿಕನ್ ರಾಯಭಾರಿಯಾಗಿದ್ದ ರಾಬರ್ಟ್ ವೈಟ್ ಎಂಬವರಿಂದ. ಅಮೇರಿಕನ್ ಧೋರಣೆಯ ಭೀಕರ ಪರಿಣಾಮಗಳನ್ನು ಕಣ್ಣಾರೆ ಕಂಡಿರುವ ಈ ವ್ಯಕ್ತಿಯನ್ನು ಅವರ ಸಂಧಾರಣಾವಾದೀ ದೃಷ್ಟಿಕೋಣಕ್ಕಾಗಿ ರೀಗನ್ ಸರಕಾರ ಅವರ ಹುದ್ದೆಯಿಂದ ಬರಖಾಸ್ತು ಮಾಡಿತ್ತು. ಅಮೇರಿಕನ್ ಕಾಂಗ್ರೆಸ್‌ನ ಉಪಸಮಿತಿಯೆಂದರು ಸಾಕ್ಷ್ಯ ಹೇಳುತ್ತಾ "ಸಾಲ್ವಡೋರ್‌ನ ಕ್ರಾಂತಿಗೆ ಕಾರಣ ಸಾಮಾಜಿಕ ಅನ್ಯಾಯವೇ ಹೊರತು ಕಮ್ಯುನಿಸ್ಟರು ಹೊರಗಿನಿಂದ ಮಧ್ಯ ಪ್ರವೇಶ ಮಾಡಿದ್ದರಿಂದ ಅಲ್ಲ...ಸಾಲ್ವಡೋರ್‌ನ ಜನರ ಪ್ರಮುಖ ಕೊಲೆಗಾರರೆಂದರೆ ಸರಕಾರದ ಭದ್ರತಾ ಪಡೆಗಳು" ಎಂದು ಆ ಮೇಲೆ ರಿಪಬ್ಲಿಕನ್ ಪಕ್ಷದ ಸದಸ್ಯರೆಡೆಗೆ ನೋಡುತ್ತಾ, "ಈ ರೀತಿಯ ಹತ್ಯೆಗಳಲ್ಲಿ ನೀವು ಸಹಯೋಗಿಗಳಾಗಬಯಸುತ್ತೀರಾ?" ಎಂದು ಕೇಳಿದರಂತೆ.

ಯುರೋಪಿನಲ್ಲೂ ಅಮೇರಿಕಾದ ಈ ನೀಚ ಕಾರ್ಯದ ಬಗ್ಗೆ ತೀವ್ರ ಅಸಮಾಧಾನ ಹರಡಿದೆ. ಸ್ವೀಡನ್ ಸರಕಾರ ಈಗಾಗಲೇ ಸಾಲ್ವಡೋರ್ ಗೆರಿಲ್ಲಾ ನಾಯಕರು ಅಲ್ಲಿಗೆ ಬಂದಾಗ ಅಧಿಕೃತ ಸ್ವಾಗತ ನೀಡಿದೆ. ಪಶ್ಚಿಮ ಜರ್ಮನಿ, ಬೆಲ್ಜಿಯಮ್, ಹಾಲಂಡ್, ಆಸ್ಟ್ರೀಯಾ ಹಾಗೂ ಸ್ಕಾಂಡಿನೇವಿಯಾದ ಸಮಾಜವಾದೀ ಪಕ್ಷಗಳು ಗೆರಿಲ್ಲಾಗಳ ಬಗ್ಗೆ ತೀವ್ರ ಉತ್ಸಾಹ ತಳೆದಿವೆ. ಜನಾಂಗ ದ್ವೇಷಿಯಾದ ಥ್ಯಾಚರ್ ಸರಕಾರಕ್ಕೂ ಸಾಲ್ವಡೋರ್‌ನ ಸರ್ವಾಧಿಕಾರೀ ಸರಕಾರದ ನೀತಿ ಒಪ್ಪಿಗೆಯಿಲ್ಲ. ನೆರೆಯ ದೇಶಗಳಾದ ಮೆಕ್ಸಿಕೋ, ವೆನೆಜುವೆಲಾ, ಇತ್ಯಾದಿ ದೇಶಗಳೂ ಸಾಲ್ವಡೋರ್‌ನಲ್ಲಿ ಅಮೇರಿಕಾದ ವರ್ತನೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಹೀಗಿದ್ದರೂ ರೀಗನ್ ಸರಕಾರ ತನ್ನ ಧೋರಣೆಯ ಪುನರ್ವಿಮರ್ಶೆ ನಡೆಸುವ ಲಕ್ಷಣಗಳಿಲ್ಲ. ಬದಲಾಗಿ ಜಗತ್ತಿಗೆ ತನ್ನ 'ಸಾಚಾತನ'ವನ್ನು 'ಮನದಟ್ಟು' ಮಾಡಿಸಲು ಅಮೇರಿಕನ್ ಸರಕಾರದ ವಿಶೇಷ ರಾಯಭಾರಿಗಳು ಯುರೋಪಿನ ವಿವಿಧ ದೇಶಗಳಲ್ಲಿ ಸಂಚರಿಸುತ್ತಿದ್ದಾರೆ. ರೀಗನ್ "ಹಿಂಸಾತ್ಮಕವಾಗಿ ಸರಕಾರವನ್ನು ಪದಚ್ಯುತಗೊಳಿಸಬಯಸುವವರ ವಿರುದ್ಧ ಅಲ್ಲಿನ ಸರಕಾರಕ್ಕೆ ಸಹಾಯ ನೀಡುತ್ತೇವೆ" ಎಂದು ಹೇಳಿದ್ದಾರೆ. ಎಲ್ ಸಾಲ್ವಡೋರ್‌ನಲ್ಲಿ ತನ್ನ ಜನವಿರೋಧೀ ಕೆಲಸಗಳಿಂದಾಗಿ ದಿನೇ ದಿನೇ ಬೆಂಬಲವನ್ನು ಕಳೆಕೊಳ್ಳುತ್ತಿರುವ ಸರ್ವಾಧಿಕಾರೀ ಸರಕಾರದ ಬೆಂಬಲಕ್ಕೆ ರೀಗನ್ ಮಹಾಶಯರು ಹಾಗೂ ಅವರ ಮಹಾಪ್ರಜಾಪ್ರಭುತ್ವ ದೇಶ ನಿಂತಿದೆ. ಈ ಧೈರ್ಯದಿಂದಲೇ ಮಿಲಿಟರಿ ಸರಕಾರ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಹೆಚ್ಚೆಚ್ಚು ದಮನ ಹಾಗೂ ಸಾಮೂಹಿಕ ಹತ್ಯೆಗಳನ್ನು ನಡೆಸುತ್ತಿದೆ. ಪರಿಣಾಮವಾಗಿ ಹೆಚ್ಚೆಚ್ಚು ಜನ ವಿಮೋಚನಾ ಹೋರಾಟದಲ್ಲಿ ಭಾಗಿಗಳಾಗುತ್ತಿದ್ದಾರೆ. ಎಲ್‌ಸಾಲ್ವಡೋರ್‌ನ ಸರ್ವಾಧಿಕಾರಿಯ ಸೈನ್ಯದಲ್ಲೂ ಇಂತಹ ಸಾಮೂಹಿಕ ಹತ್ಯೆಗಳಿಂದ ಬೇಸತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. "ನಾವು ನಮ್ಮ ಶತ್ರುಗಳನ್ನು ಭೇಟಿಯಾದೆವು. ಆ ಶತ್ರುಗಳು ನಾವೇ" ಎಂದು ಒಬ್ಬ ಯುವಕ ಸಂಧಾರಣಾ ಪರ ಸೈನ್ಯಾಧಿಕಾರಿ ಹೇಳಿದ್ದಾನೆ.

ರೀಗನ್ ಸರಕಾರದ ಹಠಮಾರಿತನ

ಪರಿಸ್ಥಿತಿ ಹೀಗಿದ್ದರೂ ರೀಗನ್ ತನ್ನ ಆಕ್ರಮಣಕಾರೀ ಧೋರಣೆಯನ್ನು ಜ್ಯಾರಿಗೊಳಿಸುತ್ತಿದ್ದಾರೆ. ಅಧಿಕಾರದಲ್ಲುಳಿಯಲು ಸಾಮೂಹಿಕ ನರಹತ್ಯೆ ಹಾಗೂ ದಮನಕ್ಕೂ ಹೇಸದ ಮಿಲಿಟರಿ ಸರಕಾರಕ್ಕೆ ಸೈನಿಕ ಸಹಾಯ ಮಾತ್ರವಲ್ಲ ಆರ್ಥಿಕ ಸಹಾಯವನ್ನೂ ಇಮ್ಮಡಿಗೊಳಿಸಲಿದ್ದಾರೆ. ಈ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ ಕಳೆದ ವರ್ಷ 10% ಇಳಿದಿತ್ತು. ಈ ವರ್ಷ ಅದು ಮತ್ತೆ ಹತ್ತು ಶೇಕಡಾ ಕಡಿಮೆಯಾಗಲಿದೆ. ಇದರಿಂದ ಮಿಲಿಟರಿ ಸರಕಾರವನ್ನು ರಕ್ಷಿಸುವುದಕ್ಕಾಗಿ ತನ್ನ ಆರ್ಥಿಕ ಸಹಾಯವನ್ನು 6.35 ಕೋಟಿ ಡಾಲರ್‌ಗೆ ಹೆಚ್ಚಿಸಲು ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ 8 ಕೋಟಿ ಡಾಲರ್ ಸಹಾಯ ಕೊಡಿಸಲು ರೀಗನ್ ಸರಕಾರ ಯೋಚಿಸುತ್ತಿದೆ.

ವಿಮೋಚನಾ ಹೋರಾಟದಲ್ಲಿ ಹೆಚ್ಚೆಚ್ಚು ಜನ ಭಾಗವಹಿಸಲಾರಂಭಿಸಿದರೂ ಎಲ್ ಸಾಲ್ವಡೋರಿನ ವಿಮೋಚನಾ ರಂಗ ಮಿಲಿಟರಿ ಸರಕಾರದೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸಲು ಸಿದ್ಧವಿದೆ. ಆದರೆ ಹೀಗಾಗಬೇಕಾದರೆ ಅಮೇರಿಕಾ ತನ್ನ ಸಶಸ್ತ್ರ ಪಾತ್ರವನ್ನು ವಾಪಾಸು ಪಡೆಯಬೇಕಾಗುವುದರಿಂದ ರೀಗನ್ ಸರಕಾರ ಇದಕ್ಕೆ ಸಿದ್ಧವಿಲ್ಲ. ರಾಜಕೀಯ ಪರಿಹಾರ ದೊರೆತು ರಕ್ತಪಾತ ನಿಲ್ಲುವುದು ಬಹುಶಃ ರೀಗನ್ ಆಡಳಿತಕ್ಕೆ ಇಷ್ಟವಿಲ್ಲ. ಅಮೇರಿಕಾದ ವಿದೇಶಾಂಗ ನೀತಿ ಎಂತಹ ಮೋಸದ ಮೇಲೆ ನಿಂತಿದೆಯೆನ್ನುವುದಂತೂ ಇದರಿಂದ ಸ್ಪಷ್ಟವಾಗುತ್ತಿದೆ. ಅದೇನೇ ಇರಲಿ ಕದನ ಕಾತರವಾಗಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಜಗತ್ತಿನ ಬೇರೆಡೆಗಳಲ್ಲಿ ಅನುಭವಿಸಿದಂತೆ ಹಾಗೂ ಇತ್ತೀಚೆಗೆ ಹತ್ತಿರದಲ್ಲೇ ಇರುವ ನಿಕಾರಗುವಾದಲ್ಲಿ ಆದಂತೆ ಇನ್ನೊಂದು ದೊಡ್ಡ ಸೋಲನ್ನನುಭವಿಸುವುದಂತೂ ಖಂಡಿತ. ○

ಐರ್ಲೆಂಡ್ - ಹೋರಾಟದ ಸದ್ಯದ ಹಂತ

ಜೈಲಿನಲ್ಲಿ ಬಾಬ್ಬಿ ಸ್ಯಾಂಡ್ಸ್‌ರ ಸಾವು, ಅದರ ಬೆನ್ನ ಹಿಂದೆ ಐರ್ಲೆಂಡಿನ ಜೈಲುಗಳಲ್ಲಿ ಮತ್ತೆ ಮೂವರು ಉಪವಾಸ ಸತ್ಯಾಗ್ರಹಿಗಳ ಸಾವು ಐರ್ಲೆಂಡಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಮಾನವೀಯ ಧೋರಣೆಗಳನ್ನು ಮತ್ತೊಮ್ಮೆ ಕಣ್ಣೆದುರಿಗೆ ನಿಲ್ಲಿಸಿವೆ. ಈ ಐರಿಷ್ ಪ್ರಜಾಪ್ರಭುತ್ವವಾಗಿ ರಾಷ್ಟ್ರವಾದಿಗಳದ್ದು ಒಂದೇ ಸರಳವಾದ ಕೇಳಿಕೆ-ತಮಗೆ ರಾಜಕೀಯ ಕೈದಿಗಳ ಸ್ಥಾನಮಾನ ಕೊಡಬೇಕೆಂದು. ಈ ಸರಳ ನ್ಯಾಯಯುತ ಕೇಳಿಕೆಯನ್ನು ಮನ್ನಿಸುವ ಬದಲು ಬಂಧಿತರು ಒಬ್ಬೊಬ್ಬರಾಗಿ ಜೈಲಿನಲ್ಲಿ ಸಾಯುವುದನ್ನು ನೋಡಬಯಸುತ್ತಿದ್ದಾರೆ. ಇದು ಐರ್ಲೆಂಡಿನ ಬಗ್ಗೆ ಬ್ರಿಟಿಷ್ ಸಾಮ್ರಾಜ್ಯಶಾಹೀ ಧೋರಣೆಯ ಮುಂದುವರಿಕೆ ಮಾತ್ರ ಎಂದು ಈ ಲೇಖನದಿಂದ ತಿಳಿಯುತ್ತದೆ. ಐರ್ಲೆಂಡಿನ ಕಮ್ಯುನಿಸ್ಟ್ ಪಕ್ಷದ ಉಪ ಮಹಾ ಕಾರ್ಯದರ್ಶಿ "ಜೇಮ್ಸ್ ಸ್ಟೇವರ್ಟ್"ರು ಈ ಲೇಖನವನ್ನು ಬರ್ಲಿನ್‌ನಲ್ಲಿ 1980ರ ಅಕ್ಟೋಬರ್ 20ರಿಂದ 24ರ ವರೆಗೆ ನಡೆದ ಅಂತರಾಷ್ಟ್ರೀಯ ವೈಜ್ಞಾನಿಕ ಸಮ್ಮೇಳನಕ್ಕಾಗಿ ಬರೆದಿದ್ದರು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಟದ ದೀರ್ಘ ಇತಿಹಾಸ ಐರಿಷ್ ಜನತೆಗಿದೆ. ಆ ಹೋರಾಟದ ಚರಿತ್ರೆಯನ್ನು ಸ್ಥೂಲವಾಗಿ ಪರಿಶೀಲಿಸಲೂ ಇಲ್ಲಿ ಸಮಯಾವಕಾಶವಿಲ್ಲ. ಭೌಗೋಳಿಕವಾಗಿ ಮಾಜೀ ಬ್ರಿಟಿಷ್ ಸಾಮ್ರಾಜ್ಯಕ್ಕೆ ಬಹಳ ಸಮೀಪದಲ್ಲಿದ್ದ ಪ್ರಥಮ ವಸಾಹತು.

ವಿಮೋಚನಾಹೋರಾಟ

ಹತ್ತೊಂಬತ್ತೇ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ನೇರವಾಗಿ ವೆಸ್ಟ್‌ಮಿನಿಸ್ಟರ್‌ನಿಂದ ಐರ್ಲೆಂಡನ್ನು ಆಳುತ್ತಿದ್ದ ಬ್ರಿಟನ್ನಿನ ಆಳುವವರ್ಗ ಐರ್ಲೆಂಡಿನಲ್ಲಿ ರಾಷ್ಟ್ರೀಯ ಬೂರ್ಜ್ವಾ ವರ್ಗ, ಸಣ್ಣ ಹಾಗೂ ದೊಡ್ಡ ರೈತರು, ಸಣ್ಣ ವ್ಯಾಪಾರಿಗಳು, ಕಸಬುದಾರರು ಹಾಗೂ ದುಡಿಯುವ ವರ್ಗ ಇವರೆಲ್ಲರ ಬೆಂಬಲಗಳಿಸಿ ಉತ್ತರೋತ್ತರ ಬೆಳೆಯುತ್ತಿದ್ದ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ಎದುರಿಸಬೇಕಾಗಿತ್ತು.

ಈ ಚಳುವಳಿಯನ್ನು ಎದುರಿಸುವುದರೊಂದಿಗೇ ಜೇಮ್ಸ್ ಕೋನೋಲಿಯವರ ಮಾರ್ಕ್ಸ್‌ವಾದೀ ಬೋಧನೆಗಳಿಂದ ಪ್ರಭಾವಿತವಾದ ಕಾರ್ಮಿಕ ವರ್ಗ ರಾಷ್ಟ್ರೀಯ ಸ್ವಾತಂತ್ರ್ಯದ ಈ ಮಿತ್ರಕೂಟದ ಒಂದು ಅಂಗವಾಗಿ ಮಾತ್ರ ಉಳಿಯದೆ ಅದರ ನಾಯಕತ್ವದ ಸ್ಥಾನ ಪಡೆಯುವ ಅಪಾಯವನ್ನೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಎದುರಿಸಬೇಕಾಗಿತ್ತು. ಇದನ್ನು ತಡೆಯುವ ಧೋರಣೆಗಳನ್ನು ಅವರು ಅಂಗೀಕರಿಸಬೇಕಾಗಿತ್ತು.

ಬ್ರಿಟಿಷ್ ಆಳುವವರ್ಗ ತನ್ನ ಮನಸ್ಸಿನಲ್ಲಿ ಸದಾ ಭಯಪಡುತ್ತಿದ್ದ ಇನ್ನೊಂದು ಅಪಾಯದ ಬಗ್ಗೆಯೂ ಹೇಳಬೇಕು. ಐರ್ಲೆಂಡಿನ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ ಬ್ರಿಟಿಷ್ ಕಾರ್ಮಿಕ ವರ್ಗದೊಂದಿಗೆ ಸೇರಿಕೊಂಡು ಬ್ರಿಟಿಷ್ ಗುತ್ತೇದಾರಿ ಬಂಡವಾಳಶಾಹಿಯ ಶೋಷಣೆ ಹಾಗೂ ವಗ-ಆಳ್ವಿಕೆಯಿಂದ ತಮ್ಮ ಪರಸ್ಪರ ಉದ್ಧಾರಕ್ಕಾಗಿ ಒಟ್ಟಿಗೇ ಹೋರಾಡಬಹುದೆಂಬುದೇ ಆ ಭಯ.

ಈ ಬೆಳವಣಿಗೆಯನ್ನು ತಡೆಯಲು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಅರಿಸಿದ ವಿಧಾನವೆಂದರೆ ಐರ್ಲೆಂಡಿನೊಳಗೇ ತನ್ನ ಹಿತಾಸಕ್ತಿಗನುಗುಣವಾಗಿ ವರ್ತಿಸುವ ಒಂದು ಕೂಟವನ್ನು ತಯಾರು ಮಾಡುವುದು. ಈ ಕೂಟ ಯೂನಿಯನಿಸ್ಟ್ ಪಾರ್ಟಿ ಎಂದು ಹೆಸರಾಯಿತು. ಆ ಪಾರ್ಟಿಯ ನಾಯಕತ್ವ ಶ್ರೀಮಂತ ಜಮೀನ್ದಾರರದ್ದಾಗಿತ್ತು. ಈ ಶ್ರೀಮಂತ ಜಮೀನ್ದಾರ ವರ್ಗದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿತಾಸಕ್ತಿಗಳು ಹದಿನೇಳನೇ ಶತಮಾನದಿಂದೀಚೆಗೆ ಬ್ರಿಟನ್ನಿನ ಆಳುವ ವರ್ಗದ ಹಿತಾಸಕ್ತಿಗಳೊಂದಿಗೆ ಬೆಸೆದುಕೊಂಡಿತ್ತು. ಈ ಕೂಟ ತನ್ನ ಪ್ರಭಾವಲಯದೊಳಗೆ ಸಣ್ಣ-ದೊಡ್ಡ ವ್ಯಾಪಾರಿಗಳು, ರೈತರು ಹಾಗೂ ಕಾರ್ಮಿಕರನ್ನು ಒಳಗೊಳ್ಳುವುದು ಅದಕ್ಕೆ ಸಾಧ್ಯವಾಯಿತು.

ಸಾಮ್ರಾಜ್ಯಶಾಹೀಪರ ಕೂಟ

ಪರಸ್ಪರ ಅಸಂಗತ ಹಾಗೂ ಕಾಲವಿರೋಧಾತ್ಮಕವಾದ ವರ್ಗಗಳ ಈ ಕೂಟ ಹುಟ್ಟಿ 1968ರ ವರೆಗೂ ಕಾರ್ಯತಃ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗನುಗುಣವಾಗಿ ವರ್ತಿಸಲು ಸಾಧ್ಯವಾದದ್ದು ಆಶ್ಚರ್ಯವೆನಿಸಬಹುದು. ಅದಕ್ಕೆ ಎರಡು ಕಾರಣಗಳಿದ್ದವು. ಮೊದಲನೆಯದಾಗಿ, ಬ್ರಿಟನ್ ಆಗ ವಿಶಾಲ ಸಾಮ್ರಾಜ್ಯವನ್ನು ಹೊಂದಿ, ಜಾಗತಿಕ ಮಾರುಕಟ್ಟೆಗಳ ಮೇಲೆ ಹತೋಟಿಪಡೆದಿದ್ದ ಜಗತ್ತಿನ ಪ್ರಮುಖ ಸಾಮ್ರಾಜ್ಯಶಾಹೀ ಶಕ್ತಿಯಾಗಿತ್ತು. ಎರಡನೆಯದಾಗಿ ಐರಿಷ್ ಜನತೆಯ ನಡುವಿನ ಧಾರ್ಮಿಕ ಭೇದಗಳನ್ನು, ಪ್ರೊಟೆಸ್ಟಂಟ್ ಧರ್ಮಾವಲಂಬಿಗಳು ತಮ್ಮ ಕ್ಯಾಥೋಲಿಕ್ ದೇಶಬಾಂಧವರ ಬಗ್ಗೆ ಹೊಂದಿದ್ದ ಚಾರಿತ್ರಿಕ ಪೂರ್ವಾಗ್ರಹಗಳನ್ನು ಉಪಯೋಗಿಸಲು ಸಾಮ್ರಾಜ್ಯಶಾಹಿಗೆ ಸಾಧ್ಯವಾಯಿತು. ಈಗ ನಾವು ಐರ್ಲೆಂಡಿನಲ್ಲಿ ಯೂನಿಯನಿಸಂ ಎಂದು ಕರೆಯುವ ಸಿದ್ಧಾಂತಕ್ಕೆ ಇದೇ ಅಡಿಗಲ್ಲಾಯಿತು. ಈ ಸಿದ್ಧಾಂತ ವಾಸ್ತವಿಕವಾಗಿ ಸಾಮ್ರಾಜ್ಯಶಾಹೀ ಪರವಾಗಿತ್ತು ಅಲ್ಲದೆ ಆರಂಭದಲ್ಲೇ ತನ್ನೊಳಗೇ ಫ್ಯಾಸಿಸ್ಟ್ ವಿಚಾರ ಹಾಗೂ ಕಾರ್ಯಕ್ರಮಗಳನ್ನು ಪಡೆದಿತ್ತು.

ಈ ರೀತಿ ಐರ್ಲೆಂಡಿನ ವರ್ಗಶಕ್ತಿಗಳ ನಡುವೆ ಮೇಲಿಂದ ಕೆಳಗೆ ವಿಭಜನೆ ಸೃಷ್ಟಿಸುವಲ್ಲಿ ಸಾಮ್ರಾಜ್ಯಶಾಹೀ ಯಶಸ್ವಿಯಾಯಿತು. ಹೀಗಿದ್ದರೂ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಸಂಪೂರ್ಣವಾಗಿ ನಾಶಮಾಡುವುದು ಬ್ರಿಟಿಷ್ ಆಳುವವರ್ಗಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಅವರ ಹಳೇ ವಿಧಾನದಲ್ಲೇ ತನ್ನ ಹತೋಟಿಯನ್ನು ಮುಂದುವರಿಸಲು ಅದಕ್ಕಾಗಲಿಲ್ಲ. ಅದಕ್ಕಾಗಿಯೇ 1920ರಲ್ಲಿ ಐರ್ಲೆಂಡನ್ನು ವಿಭಜಿಸಿ ಈಶಾನ್ಯದ ಆರು ಕೌಂಟಿಗಳ ಮೇಲೆ ತನ್ನ ನೇರ ರಾಜಕೀಯ, ಆರ್ಥಿಕ ಹಾಗೂ ಮಿಲಿಟರಿ ಹತೋಟಿಯನ್ನುಳಿಸಿಕೊಂಡಿತು. ಇದೇ ಉತ್ತರ ಐರ್ಲೆಂಡ್ ಎಂದು ಹೆಸರಾಯಿತು.

ವಿಭಜನೆಯ ದುರಂತ

ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಒಂದು ಸೋಲು ಐರ್ಲೆಂಡಿನ 32 ಕೌಂಟಿಗಳಲ್ಲಿ 26 ಕೌಂಟಿಗಳಿಗೆ ಅದು ಸ್ವಯಂನಿರ್ಧಾರದ ಅವಕಾಶ ಕೊಡಬೇಕಾಯಿತು. ಆದರೆ ಉತ್ತರದ ಈ 'ಪುಟ್ಟ ರಾಜ್ಯ'ದ ಸ್ಥಾಪನೆಯನ್ನು ಸಾಮ್ರಾಜ್ಯಶಾಹಿಗಳು ಐರ್ಲೆಂಡ್ ಜನತೆಯ ಸಂಪೂರ್ಣ ವಿಮೋಚನೆಯನ್ನು ತಡೆಯಲು ಮಾತ್ರವಲ್ಲ ಐರ್ಲೆಂಡಿನ ಸಂಪೂರ್ಣ ದ್ವೀಪವನ್ನೇ ಸಾಮ್ರಾಜ್ಯಶಾಹಿಯ ಪ್ರಭಾವಲಯದೊಳಗೆ ಇರಿಸಿಕೊಳ್ಳಲು ಉಪಯೋಗಿಸಿಕೊಂಡರು.

ಈ ವಿಭಜನೆಯ ಮುಖ್ಯ ದುರಂತವೆಂದರೆ ಒಂದು ದ್ವೀಪದ ಭೌಗೋಳಿಕ ವಿಭಜನೆಯಲ್ಲ; ಒಂದು ಜನತೆಯ ವಿಭಜನೆ. ಐರಿಷ್ ಕಾರ್ಮಿಕ ವರ್ಗ, ದುಡಿಯುವ ಜನರ ಮಟ್ಟಿಗೆ ಎಲ್ಲಕ್ಕಿಂತ ಗಂಭೀರ ಅಂಶವೆಂದರೆ ಸಾಮ್ರಾಜ್ಯಶಾಹಿಯ ಈ ಯುಕ್ತಿಯಿಂದಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಸಂಘಟಿತ ಕಾರ್ಮಿಕ ಚಳುವಳಿಯಿಂದ ಬೇರ್ಪಡುವಂತಾಯಿತು. ಪರಿಣಾಮವಾಗಿ ಇಂದಿನವರೆಗೂ ಈ ಎರಡೂ ಚಳುವಳಿಗಳಲ್ಲೂ ಗಂಭೀರ ರಾಜಕೀಯ ನಿರ್ಬಲತೆ ಬಂದುಬಿಟ್ಟಿತು.

ವಿಭಜನೆಯು ದಕ್ಷಿಣ ಹಾಗೂ ಉತ್ತರ ಈ ಎರಡೂ ಕಡೆಯ ಐರಿಷ್ ಜನತೆಗೆ ಗಂಭೀರ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿತು. ಐರ್ಲೆಂಡಿನ ಇತರ ಭಾಗಗಳಿಂದ ಕೈಗಾರಿಕೀಕೃತ ಈಶಾನ್ಯ ಭಾಗವನ್ನು ಬೇರ್ಪಡಿಸಿದುದರಿಂದ ಐರ್ಲೆಂಡ್ ಗಣತಂತ್ರಕ್ಕೆ ಒಂದು ಸಶಕ್ತ ಆರ್ಥಿಕ ವ್ಯವಸ್ಥೆಯನ್ನು ಕಟ್ಟಲು ಬಹಳ ಕಷ್ಟವಾಯಿತು. ಮತ್ತು ಅದು ವಿದೇಶೀ, ವಿಶೇಷವಾಗಿ ಬ್ರಿಟಿಷ್ ಗುತ್ತೇದಾರೀ ಬಂಡವಾಳಶಾಹಿಯ ಪ್ರಾಬಲ್ಯಕ್ಕೆ ಒಳಗಾಗುವಂತಾಯಿತು.

1921 ರಿಂದ 1968ರ ಅವಧಿಯಲ್ಲಿ ಈ ಪರಿಹಾರ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳಿಗನುಗುಣವಾಗಿರುವಂತೆ ಕಂಡಿತು. ದಕ್ಷಿಣ ಭಾಗ ಒಂದು ಸಾರ್ವಭೌಮ ಪ್ರಭುತ್ವವಾದರೂ (ಸೈನಿಕ ದೃಷ್ಟಿಯಿಂದ ತಟಸ್ಥ ದೇಶವಾದರೂ) ಅದು ಸಾಮ್ರಾಜ್ಯಶಾಹಿಯ ಪ್ರಭಾವಲಯದೊಳಗೇ ಸ್ಥಿರವಾಗಿತ್ತು ಮತ್ತು ಉತ್ತರ ಭಾಗ ಯೂನಿಯನಿಸ್ಟ್ ಪಕ್ಷದ ಪಾರುಪತ್ಯೆಯಲ್ಲಿ ಬ್ರಿಟನ್ನಿನ ವಸಾಹತುವಾಗಿ ಉಳಿದುಕೊಂಡಿತು. ಆ ಅವಧಿಯಲ್ಲಿ "ಐರಿಷ್ ಪ್ರಶ್ನೆ"ಯನ್ನು ಬ್ರಿಟಿಷ್ ರಾಜಕೀಯದಿಂದ ಇಲ್ಲವಾಯಿತು. ಮತ್ತು ಐರಿಷ್ ಮತ್ತು ಬ್ರಿಟಿಷ್ ಕಾರ್ಮಿಕ ವರ್ಗ ಮತ್ತು ದುಡಿಯುವ ಜನರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಜತೆಗೂಡುವ ಸಾಧ್ಯತೆಯನ್ನು ತಡೆದಂತಾಯಿತು.

ಯುದ್ಧಾನಂತರ

ಆದರೆ ಘಟನೆಗಳು ನಿಂತಲ್ಲೇ ನಿಲ್ಲುವುದಿಲ್ಲ. 1920ರ ದಶಕದಲ್ಲಿ ಉಚಿತ ಉಪಾಯವಾಗಿ ಕಂಡದ್ದು ಸಾಮ್ರಾಜ್ಯಶಾಹಿಗೆ 1960ರ ದಶಕದಲ್ಲಿ ಅಷ್ಟೇನೂ ಪ್ರಯೋಜನಕಾರಿಯಾಗಿ ಕಾಣಲಿಲ್ಲ. ದ್ವಿತೀಯ ಜಾಗತಿಕ ಯುದ್ಧದ ನಂತರ ಫ್ಯಾಸಿಸಂ ಸೋತುಹೋಗಿತ್ತು. ಸೋವಿಯೆತ್ ಯೂನಿಯನ್ ಈಗ ಏಕಮಾತ್ರ ಸಮಾಜವಾದಿ ದೇಶವಾಗಿ ನಿಲ್ಲುವ ಅಗತ್ಯವಿರಲಿಲ್ಲ. ಒಂದು ಜಾಗತಿಕ ಸಮಾಜವಾದೀ ವ್ಯವಸ್ಥೆ ಸೃಷ್ಟಿಯಾಗುತ್ತಲಿತ್ತು. ಶಾಂತಿ, ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಜಗತ್ತಿನಾದ್ಯಂತ ಸಾರ್ವತ್ರಿಕ ಚಳವಳಿಗಳು ಉಕ್ಕೇರುತ್ತಿದ್ದವು. ಸಾಮ್ರಾಜ್ಯಶಾಹಿ ಜಾಗತಿಕ ಮಟ್ಟದಲ್ಲಿ ಮತ್ತು ತನ್ನ ಹಿಂದಿನ ಸಾಮ್ರಾಜ್ಯವನ್ನು ಕಳಕೊಂಡ ಬ್ರಿಟಿಷ್ ಸಾಮ್ರಾಜ್ಯಶಾಹಿ ಜಾಗತಿಕ ಶಕ್ತಿ ಸಮತೋಲನದಲ್ಲಿನ ಈ ಬದಲಾವಣೆಗಳಿಗೆ ಉತ್ತರ ಕೊಡಬೇಕಾಗಿತ್ತು; ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಪುನರ್‌ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು: ಯುರೋಪಿಯನ್ ಆರ್ಥಿಕ ಸಮುದಾಯ(EEC) ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳು ಇತ್ಯಾದಿ ಹೊಸ ರೂಪಗಳು ಹುಟ್ಟಿಕೊಂಡವು.

ಈ ಎಲ್ಲಾ ಬದಲಾವಣೆಗಳು ಐರ್ಲೆಂಡಿನ ಮೇಲೂ ಪರಿಣಾಮ ಬೀರಿದವು. ಉತ್ತರ ಐರ್ಲೆಂಡಿನಲ್ಲಿ, ಯೂನಿಯನಿಸ್ಟ್ ಪಕ್ಷದ ಆಡಳಿತ ಬ್ರಿಟಿಷ್ ಸರಕಾರದ ಪ್ರೋತ್ಸಾಹದಿಂದ ವಿದೇಶೀ ಗುತ್ತೇದಾರಿ ಕಂಪೆನಿಗಳನ್ನು ತಮ್ಮ ಕಾರ್ಖಾನೆಗಳ ಶಾಖೆಗಳನ್ನು ಸ್ಥಾಪಿಸಲು ಆಕರ್ಷಿಸುವುದರಲ್ಲಿ ತೊಡಗಿತ್ತು. ಭೂಮಾಲಕರು, ಸಣ್ಣ-ದೊಡ್ಡ ವ್ಯಾಪಾರಿಗಳು, ಸಣ್ಣ-ದೊಡ್ಡ ರೈತರು ಹಾಗೂ ಕಾರ್ಮಿಕರ ಸರ್ವವರ್ಗಗಳ ಯೂನಿಯನಿಸ್ಟ್ ಕೂಟ ಒಡೆದುಹೋಗಲು ಇದೇ ಆಧಾರವಾಯಿತು. ಈ ಗುತ್ತೇದಾರಿ ಒಳನುಗ್ಗಿದ್ದರಿಂದ ಯೂನಿಯನಿಸಂ ಸಿದ್ಧಾಂತದ ಬೆಂಬಲಿಗರಲ್ಲಿ ಹಲವರ ಕೈಗಾರಿಕೆ ಹಾಗೂ ವ್ಯಾಪಾರ ಉತ್ತರ ಐರ್ಲೆಂಡಿನ ಆರ್ಥಿಕ ವ್ಯವಸ್ಥೆಯಿಂದ ಹೊರದಬ್ಬಲ್ಪಟ್ಟು ನಾಶವಾದವು. ಇದು ಎಷ್ಟರವರೆಗೆ ನಡೆಯಿತೆಂದರೆ ಈಗ ಸುಮಾರು 78%ದಷ್ಟರವರೆಗೆ ಉತ್ಪಾದನೆ ಬಹುರಾಷ್ಟ್ರೀಯ ಕಂಪೆನಿಗಳ ವಶದಲ್ಲಿದೆ.

ವಿತರಣಾ ವಲಯ ಹಾಗೂ ಕೃಷಿ ಕ್ಷೇತ್ರದಲ್ಲೂ ಇದೇ ಪ್ರಕ್ರಿಯೆ ಕಂಡುಬಂತು. 1950 ರಿಂದ 1973ರ ಅವಧಿಯಲ್ಲಿ 36000 ಉದ್ಯೋಗಾವಕಾಶಗಳು ನಷ್ಟವಾದವು.

[ಮುಂದುವರಿಯುವುದು]

ಸಮತಾವಾದಿ ಸಮಾಜದಲ್ಲಿ ವ್ಯಕ್ತಿಗಳ ಆಸಕ್ತಿಗಳು ಪರಸ್ಪರ ವಿರುದ್ಧವಾಗಿರದೆ ಒಂದೇ ರೀತಿ ಇರುತ್ತದೆ. ಆದ್ದರಿಂದ ಸ್ಪರ್ಧೆ ನಾಶವಾಗುತ್ತದೆ. ಆಗ ಈ ದಿನದಂಥ ಶ್ರೀಮಂತ ಮತ್ತು ಬಡ ವರ್ಗ ಮುಂತಾದ ವೈಯುಕ್ತಿಕ ವರ್ಗಗಳ ವಿನಾಶದ ಪ್ರಶ್ನೆಯೇ ಬರುವುದಿಲ್ಲ.

ಫ್ರೆಡರಿಕ್ ಎಂಗೆಲ್ಸ್

ನರೋದ್ನಿಸಂ, ಬಾಕ್ಸರಿಸಂ, ನಕ್ಸಲಿಸಂ

–ಪಿ. ಕೆ. ಸುಬ್ರಮಣಿ

ಕ್ರಾಂತಿಕಾರಕವಾದ ಶ್ರಮಜೀವಿ ವರ್ಗ ತನ್ನ ಅಸ್ತಿತ್ವವನ್ನು ಅಭಿವ್ಯಕ್ತಗೊಳಿಸುತ್ತಿದ್ದ ಸಂದರ್ಭದಲ್ಲೇ ದಿಕ್ಕು ಕಾಣದೆ ತಡವರಿಸುತ್ತಿದ್ದ ಅರಾಜಕವಾದಿಗಳ ಮಾರ್ಗದರ್ಶನದಡಿಯಲ್ಲಿ ಕ್ರಾಂತಿಕಾರೀ ಚಳುವಳಿಗಳು ಐರೋಪ್ಯ ದೇಶಗಳಲ್ಲಿ ತೀವ್ರ ರೀತಿಯಲ್ಲಿ ರೂಪ ಪಡೆಯಲಾರಂಭಿಸಿತು. ಅದನ್ನನುಸರಿಸಿ ಅಂದಿನ ಅರಾಜಕವಾದಿಗಳಾದ ಬರಹಗಾರರು, ಕಲಾಕಾರರು, ಕವಿಗಳು ನಿಜವಾದ ವೈಜ್ಞಾನಿಕ ತಿಳುವಳಿಕೆಯಿಂದೊಡಗೂಡಿದ ಕ್ರಾಂತಿಕಾರೀ ಚಳುವಳಿ ಯಾವುದೆಂಬುದನ್ನು ಅರಿಯಲು ಸಾಮರ್ಥ್ಯವಿಲ್ಲದೆ ಯೂರೋಪಿನ ಬಕುನಿನ್ (ಅರಾಜಕವಾದದ ಪ್ರತಿಪಾದಕ. ಮೊದಲನೆಯ ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನಲ್ಲಿ ಮಾರ್ಕ್ಸ್‌ನ ತತ್ವಗಳನ್ನು ವಿರೋಧಿಸಿದನು. ನಂತರ ಅವನನ್ನು ಮೊದಲನೆಯ ಇಂಟರ್‌ನ್ಯಾಶನಲ್‌ನಿಂದ ಹೊರಹಾಕಲ್ಪಟ್ಟಿತು). ಪ್ರೂಧೋನಿಸ್ಟ್ (ಜೋಸೆಫ್ ಪ್ರೂಧೋನ್ (1809-1865) ಫ್ರಾನ್ಸ್‌ನ ಅರಾಜಕವಾದಿ. ಪರಿಷ್ಕರಣವಾದದ ಪ್ರತಿಪಾದಕ)ಗಳು ಹಾಕಿದ ಗೆರೆಯೊಳಗೆ ತಮ್ಮ ವಿಚಾರಗಳನ್ನಿಟ್ಟು ಪ್ರವರ್ತಿಸುತ್ತಿದ್ದರು. 1964ರ ಪ್ಯಾರೀಸ್ ಕಮ್ಯೂನಿನ ಪಾಠಗಳನ್ನು ಯೂರೋಪಿನ ಅರಾಜಕವಾದಿಗಳು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಕ್ರಾಂತಿಯ ಬಗೆಗಿನ ದೃಷ್ಟಿಕೋನಕ್ಕೆ ವಿರುದ್ಧವಾಗಿ ಸಮರಸವಾದಿಗಳಾಗಿಯೂ, ಪರಿಷ್ಕರಣವಾದಿಗಳಾಗಿಯೂ ಪ್ರತಿಕ್ರಾಂತಿಕಾರಿಗಳಾಗಿಯೂ ಪರಿವರ್ತಿತಗೊಂಡರು. ಈ ಐತಿಹಾಸಿಕ ಸತ್ಯ ಕಾರ್ಲ್ ಮಾರ್ಕ್ಸ್, ಎಂಗೆಲ್ಸ್ ಕಾಲದಲ್ಲಿ ಘಟಿಸಿದ ಸತ್ಯಕ್ಕಿಂತಲೂ ಲೆನಿನ್ ಕಾಲದ ಬೋಲ್ಶೆವಿಕ್ ಚಳುವಳಿ ಶಕ್ತಿ ಪಡೆಯುವ ಮುನ್ನ ಜಾರ್‌ನ ಸರ್ವಾಧಿಕಾರವನ್ನು ಉರುಳಿಸುವ ದೃಷ್ಟಿಯಿಂದ ನರೋದ್ನಿಕ್‌ಗಳೆಂದು ಕರೆಯಲ್ಪಟ್ಟ ಅರಾಜಕವಾದೀ ವ್ಯಕ್ತಿಗಳು ಸಾಹಸವಾದಿಗಳಾಗಿಯೂ, ವರ್ಗವಿರೋಧಿಗಳನ್ನು ಮುಗಿಸಿಬಿಡುವ ಚಟುವಟಿಕೆಗಳಿಂದಲೂ ಸಂಘಟನಾ ವಿಧಾನದಲ್ಲಿ ತಮಗಿದ್ದ ಅಜ್ಞಾನವನ್ನು ಬಹಿರಂಗಗೊಳಿಸುತ್ತಿದ್ದರು. ಅದನ್ನೆದುರಿಸಿ ಲೆನಿನ್ ದೀರ್ಘವಾದ ಹೋರಾಟ ನಡೆಸಿ ಗೆಲುವನ್ನು ಪಡೆದರು. ದಬ್ಬಾಳಿಕೆಗೊಳಗಾಗಿದ್ದ ಎಲ್ಲ ವಿಭಾಗಗಳ ಶೋಷಿತರನ್ನು ಸಂಘಟನಾತ್ಮಕವಾಗಿ ಒಂದುಗೂಡಿಸುವ ಕಾರ್ಯದಲ್ಲಿ ಪೂರ್ಣವಾಗಿ ಭಾಗವಹಿಸಿ ಬೋಲ್ಶೆವಿಕ್ ಪಕ್ಷವನ್ನು ಸೃಷ್ಟಿಸಿದರು. ಸಂಘಟನಾತ್ಮಕವಾಗಿ ಒಂದುಗೂಡಿಸಿದ ಜನಸಮುದಾಯವನ್ನು ರಾಜಕೀಯವಾಗಿ ತರಬೇತಿಗೊಳಿಸಿ ಕ್ರಾಂತಿಗೆ ಸಜ್ಜುಗೊಳಿಸಿದರು. ಅದರ ಫಲವೇ 1917ರಲ್ಲಿ ನಡೆದ ಲೋಕದ ದಿಕ್ಕನ್ನೇ ಬದಲಿಸಿದ ಅಕ್ಟೋಬರ್ ಕ್ರಾಂತಿ. ಇದು ಚರಿತ್ರೆಯಲ್ಲಿ ಶ್ರಮಜೀವಿವರ್ಗ ಸಂಘಟನಾತ್ಮಕವಾಗಿ ರೂಪಿಸಿದ ಕ್ರಾಂತಿ ಮತ್ತು ಪ್ರಭುತ್ವಕ್ಕೊಂದು ಉದಾಹರಣೆ.

ಅರಾಜಕವಾದ ಎಂದರೇನು ?

ಅರಾಜಕವಾದ ಅತ್ಯಂತ ಪ್ರಮುಖವಾದ ಅಂಶ. ಎಲ್ಲಾ ರಂಗಗಳಲ್ಲೂ ಮೊಂಡುವಾದವನ್ನು ವ್ಯಕ್ತಿವಾದವನ್ನು ಮೂಡಿಸುವುದು.

ವರ್ಗವಿರೋಧಿಗಳನ್ನು ಮುಗಿಸುವುದು ವೈಯಕ್ತಿಕ ಸಾಹಸವಾದವನ್ನು ತನ್ನ ಗುರಿಯನ್ನಾಗಿಸಿಕೊಳ್ಳುವುದು, ಕೊಲೆ ಸುಲಿಗೆಗಳಲ್ಲಿ ನಂಬಿಕೆಯಿರಿಸುವುದು.

ಸಂಘಟನೆಯನ್ನು ವಿರೋಧಿಸುವುದು ತಮ್ಮನ್ನು ತಮ್ಮ ಚಿಂತನೆಗಳನ್ನು ವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ ಶೋಷಣಾವಾದಕ್ಕೆ ಹೊಸ ರೂಪಕೊಟ್ಟು ಹೇಳುವುದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವುದು. ಇವುಗಳಿಗೆ ಚಾಲನೆ ನೀಡುತ್ತಿದ್ದವರು ಬಹುಪಾಲು ಬುದ್ಧಿಜೀವಿಗಳೇ. ಸ್ವಭಾವದಲ್ಲಿ ಅವರು ಎಲುಬಿಲ್ಲದ ಮಾಂಸದ ಪಿಂಡಗಳೆನ್ನಬಹುದು. ನಿಂತರೆ ನಿಮಿರಿನಿಲ್ಲುವ, ಬಿದ್ದರೆ ಪೂರ್ಣವಾಗಿ ನೆಲಕಚ್ಚುವ ಸ್ವಭಾವವೆನ್ನಬಹುದು.

ಈ ಅರಾಜಕವಾದಿಗಳು ಬುದ್ಧಿಜೀವಿಗಳ ಸೃಷ್ಟಿಯೆಂದಾದರೂ ಸಹ ಅದು ಅಭಿವೃದ್ಧಿಶೀಲ ಕ್ರಾಂತಿಕಾರೀ ಚಳುವಳಿಯನ್ನು ಬಾಧಿಸುತ್ತಿತ್ತು. ಅಂದಿನ ಕ್ರಾಂತಿಪೂರ್ವ ರಷ್ಯಾದ ಶ್ರಮಜೀವಿವರ್ಗದ ಪಕ್ಷವಾಗಿದ್ದ ಬೋಲ್ಶೆವಿಕ್ ಪಕ್ಷವನ್ನು ಹಲವು ಮೂಲೆಗಳಿಂದ ಆಕ್ರಮಣಮಾಡುವ ಶಕ್ತಿಪಡೆದಿದ್ದ ನರೋಡಿನಿಸಂ ಅಸ್ತಿತ್ವದಲ್ಲಿತ್ತು. ಅದು ಹಲವಾರು ಗುಂಪುಗಳಲ್ಲಿ ರೂಪಿತಗೊಂಡಿತ್ತು. ಇವುಗಳೆಲ್ಲಕ್ಕೂ ಹಿಂದೆ ತಿಳಿಸಿದ ಆ ಎಲುಬಿಲ್ಲದ ಬುದ್ಧಿಜೀವಿಗಳೇ ನಾಯಕತ್ವ ವಹಿಸಿದ್ದರು. ಅವುಗಳು ಒಂದು ವಾದ ಎಂಬ ಆಧಾರದ ಮೇಲೆ ನಿಂತಿರುವ ಒಂದು ವರ್ಗಸ್ವಭಾವ ಎಂಬುದನ್ನು ಲೆನಿನ್ ಮತ್ತು ಸ್ಟಾಲಿನ್ ಸ್ಪಷ್ಟಪಡಿಸಿದ್ದರು. ಪುಟ್ಟ ಬಂಡವಾಳಗಾರರು, ಮತ್ತು ಸಣ್ಣ ಒಡೆತನದ ವರ್ಗ ತಮ್ಮಲ್ಲಿನ ಕ್ರಾಂತಿಕಾರೀ ಸ್ವಭಾವದ ಕೊರತೆಯನ್ನು ಅಭಿವ್ಯಕ್ತಗೊಳಿಸುವಂತಹ ಪಕ್ಷಗಳ ರಚನೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಶ್ರಮಜೀವಿ ವರ್ಗ ಯಾವುದನ್ನು ತನ್ನ ವಿಮೋಚನೆಗಿರುವ ಏಕೈಕ ಮಾರ್ಗವೆಂದು ಅರಿತು ಸಂಘಟನಾತ್ಮಕವಾಗಿ ಆ ದಿಕ್ಕಿನಲ್ಲಿ ಸಾಗುತ್ತಿರುವಾಗ ಅವರನ್ನು ಆತ್ಮಹತ್ಯೆಯ ದಿಕ್ಕಿಗೆ ಕೊಂಡೊಯ್ಯುವಲ್ಲಿ ಎಷ್ಟು ಸಮರ್ಥರು ಎಂಬುದನ್ನು ಚರಿತ್ರೆ ನಿರೂಪಿಸಿದೆ.

ಪುಟ್ಟ ಬಂಡವಾಳಗಾರ ಕ್ರಾಂತಿ ಪಕ್ಷಗಳು ಚರಿತ್ರೆಯಿಂದ ನಿರ್ಗಮಿಸಿವೆ. ಅವುಗಳು ನೆಲೆ ಕಾಣದೆ ಅಲೆಯುತ್ತಾ ಕೊನೆಗೆ ಶ್ರಮಜೀವಿ ವರ್ಗದ ನಡುವೆ ತೂರಿಕೊಂಡು, ತಮ್ಮ ಬಣ್ಣಗಳನ್ನು ಬದಲಾಯಿಸಿಕೊಳ್ಳುತ್ತಾ ಕ್ರಾಂತಿಯ ಆಲಾಪನೆ ಮಾಡತೊಡಗುವುದರಿಂದ ಪ್ರತಿಕ್ರಾಂತಿಗಳಿಗೆ ಅನುಕೂಲವಾಗುತ್ತದೆಂಬ ಅಂಶ ಅವರಿಗೆ ಹೊಳೆಯುವುದೇ ಇಲ್ಲ. 1914ರಲ್ಲಿ ಮಂಚೂ ರಾಜವಂಶ ಚೀನಾದಲ್ಲಿ ಆಡಳಿತ ನಡೆಸುತ್ತಿದ್ದಾಗ ಇದೇ ಪುಟ್ಟ ಬಂಡವಾಳಗಾರರು ಬಾಕ್ಸರ್ ಚಳುವಳಿಯ ಹೆಸರಿನಲ್ಲಿ ಮಂಚೂ ವಂಶದ ಸರ್ವಾಧಿಕಾರವನ್ನು ಸಾಮ್ರಾಜ್ಯವಾದವನ್ನು ಎದುರಿಸಿ ವ್ಯಕ್ತಿ ಸಾಹಸವಾದವನ್ನು ಅನುಸರಿಸಿ ವರ್ಗವಿರೋಧಿಗಳನ್ನು ಮುಗಿಸಿಬಿಡುವ ಕಾರ್ಯದಲ್ಲಿ ತೊಡಗಿ, ಬೆಳೆದುಬರುತ್ತಿದ್ದ ರಾಜಕೀಯ ಸಂಘಟನಾ ವಿಧಾನದ ಚಳುವಳಿಗೆ ವಿರೋಧವಾಗಿ ನಿಂತರು. ಚೀನದಲ್ಲಿ ಅಂದು ಬಲಿಷ್ಠವಾಗಿದ್ದ ದೊರೆಗಳ ಸರ್ವಾಧಿಕಾರೀ ಆಡಳಿತವನ್ನು ಪ್ರತಿಭಟಿಸುತ್ತಿದ್ದ ಜನರಿಗೆ ಆಜನ್ಮ ಶತ್ರುಗಳಾಗಿ ಮಾರ್ಪಟ್ಟರು. ಇದು ಚೀನದ ಕಮ್ಯುನಿಸ್ಟ್ ಪಕ್ಷಕ್ಕೆ ತಲೆನೋವಾಗಿತ್ತು. ಅದನ್ನು ರಾಜಕೀಯವಾಗಿ ಎದುರಿಸಿ ಹೋರಾಟ ನಡೆಸಿ ನಾಮಾವಶೇಷಗೊಳಿಸಿದ ಕೀರ್ತಿ ಕಾಂ. ಮಾವೋ ಅವರಿಗೆ ಸಲ್ಲುತ್ತದೆ. ಬಾಕ್ಸರ್ ಚಳುವಳಿಗೆ ಆಧಾರವಾಗಿದ್ದ ಅರಾಜಕವಾದಿಗಳು ನಂತರ ಹಲವಾರು ಗುಂಪುಗಳಾಗಿ ಛಿದ್ರಗೊಂಡು ಪುಟ್ಟ ಬಂಡವಾಳಗಾರರ ಪಕ್ಷಗಳಲ್ಲಿ ನೆಲೆಗೊಂಡರು ಅಷ್ಟೇ ಅಲ್ಲದೆ ಕಮ್ಯುನಿಸ್ಟ್ ಪಕ್ಷದೊಳಗೂ ಸಹ ತೂರಿಕೊಂಡರು ಎಂಬುದು ಇತಿಹಾಸದ ಸತ್ಯಸಂಗತಿ. ಚೀನದ ಪ್ರಗತಿವಾದಿಗಳು ಕ್ರಾಂತಿಕಾರೀ ಪಕ್ಷವನ್ನು ಕಟ್ಟುವುದಕ್ಕೋಸ್ಕರ, ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳನ್ನು ನಾಶಮಾಡುವ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾದ ತಾತ್ವಿಕ ಹೋರಾಟದಲ್ಲಿ ಧುಮುಕಬೇಕಾಯಿತು. ಅಲ್ಲಿ ತಲೆಯೆತ್ತಿದ್ದ ಪರಿಷ್ಕರಣವಾದದ ಬಾಯಿ ಮಾತಿನ ಸುಳ್ಳು ಕ್ರಾಂತಿಕಾರಿಗಳನ್ನು ಯಶಸ್ವಿಯಾಗಿ ಎದುರಿಸಿ ಜಯಗಳಿಸಿದ ಇತಿಹಾಸದ ಪಾಠ ಜಗತ್ತಿನ ಚಳುವಳಿಗಳಿಗೆ ಆದರ್ಶಪ್ರಾಯವಾಗಿದೆ.

ಅದೇ ರೀತಿಯಲ್ಲಿ ಭಾರತದಲ್ಲಿ 60 ವರುಷಗಳ ಕ್ರಾಂತಿ ಚಳುವಳಿಯ ಪಾಠಗಳನ್ನು ಕಲಿತುಕೊಳ್ಳಲು ಅಸಮರ್ಥರಾದ ಬಾಲಿಶವಾದದಿಂದ ತಡವರಿಸುತ್ತಿರುವ ನಕ್ಸಲ್‌ವಾದದ ಭಾರತದ ಶೋಷಣಾ ವ್ಯವಸ್ಥೆಯನ್ನು ನಿರ್ಮೂಲಗೊಳಿಸುವ ಒಂದು ಚಳುವಳಿಗೆ ಆಜನ್ಮ ಶತ್ರುಗಳಾಗಿರುವುದು ಕಣ್ಣೆದುರಿನ ಸಂಗತಿ. ನಕ್ಸಲ್‌ವಾದಿಗಳು ತಮ್ಮ ಚಟುವಟಿಕೆಗಳ ಮೂಲಕ ತಮ್ಮ ಅರಾಜಕತೆಯನ್ನು ಸ್ಪಷ್ಟಪಡಿಸಿದ್ದಾರೆ. ಅದರೊಂದಿಗೆ ಪುಟ್ಟ ಬಂಡವಾಳಗಾರರ ಹಾಗೂ ಶ್ರಮಜೀವಿಗಳ ಪಕ್ಷಗಳೊಳಗೆ ಹರಡಿಕೊಂಡು ತಮ್ಮ ವರ್ಗಗುಣಕ್ಕನುಸಾರವಾಗಿ ಗೊಂದಲಗೊಳಿಸುವ ಕಾರ್ಯದಲ್ಲಿ ತೊಡಗಿರುವುದು ನಮ್ಮ ಅನುಭವಕ್ಕೆ ನಿಲುಕಿರುವ ಸಂಗತಿ.

ನಕ್ಸಲಿಸಂ ಎಂಬುದು ಭಾರತದ ಪುಟ್ಟ ಬಂಡವಾಳಗಾರ ಬುದ್ಧಿಜೀವಿಗಳ ಸಾಂಸ್ಕೃತಿಕ ನೆಲೆಗಳಿಗೆ ಮೀರಿದ ಅರಾಜಕವಾದವಾಗಿದೆ. ದುಡಿಯುವ ವರ್ಗವನ್ನು ಸಂಘಟನಾತ್ಮಕವಾಗಿ ಎದುರಿಸಲಾಗದೆ ಸೋಲೊಪ್ಪಿದ್ದನ್ನು ಅನೇಕ ಅನುಭವಗಳು ಧೃಡಪಡಿಸಿವೆ. ಜನಸಾಮಾನ್ಯರ ನಡುವೆ ಅಡ್ಡಗೋಡೆ ನಿರ್ಮಿಸಿಕೊಂಡು 'ಏಕಾಂಗಿ'ಗಳಾಗಿ ಬಿಟ್ಟಿದ್ದಾರೆ. ಇತಿಹಾಸ ಕಲಿಸಿದ ಪಾಠಗಳನ್ನು ಉದಾಸೀನ ಮಾಡಿ ಅವನತಿ ಹೊಂದುತ್ತಿದ್ದಾರೆ.

ಭಾರತದ ಕ್ರಾಂತಿ ಚಳುವಳಿಯ ಇತಿಹಾಸದಲ್ಲಿ ಅದರಲ್ಲೂ ಶ್ರಮಜೀವಿ ವರ್ಗದ ಸಮಾಜ ಪರಿವರ್ತನೆಯ ಚಳುವಳಿಯಲ್ಲಿ ಬರಡು ತತ್ವಗಳನ್ನು, ಪರಿಷ್ಕರಣವಾದವನ್ನು ವೈಯಕ್ತಿಕ ಸಾಹಸವಾದವನ್ನು ಎದುರಿಸಿ ಹೋರಾಡಿದ ಚರಿತ್ರೆಯಿದೆ. ಭಾರತದಲ್ಲಿ ಎಂತಹ ರೀತಿಯಲ್ಲಿ, ಸಾಮೂಹಿಕ ಕ್ರಾಂತಿ ಚಳುವಳಿಯನ್ನು ಮುನ್ನಡೆಸಲು ಸಾಧ್ಯವಾಯಿತೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಇವುಗಳೆಲ್ಲವನ್ನು ನಿರಾಕರಿಸಿ ಕ್ರಾಂತಿ ಪಂಡಿತರು ಭಯೋತ್ಪಾದನೆಯಲ್ಲಿ ನಂಬಿಕೆಯಿರಿಸಿ ಜನಕ್ರಾಂತಿ ಮಾಡುತ್ತೇವೆಂದು ಹೇಳಿಕೊಳ್ಳುತ್ತಿರುವುದು ಎಂತಹ ವಿಪರ್ಯಾಸ.

●

ಕ್ರಾಂತಿ

ಕ್ರಾಂತಿ ಎಂಬುದು ಒಂದು ಭೋಜನಕೂಟವಲ್ಲ; ಅಥವಾ ಒಂದು ಪ್ರಬಂಧ ರಚನಾ ಸ್ಪರ್ಧೆಯೂ ಅಲ್ಲ ಅಥವಾ ಚಿತ್ರ ಬರೆಯುವುದೂ ಅಲ್ಲ; ಅಥವಾ ಕಸೂತಿಯ ಕೆಲಸವೂ ಅಲ್ಲ. ಕ್ರಾಂತಿಯು ಶುದ್ಧೀಕರಣವಲ್ಲ. ನೆಮ್ಮದಿಯಿಂದ ಜರುಗುವುದಲ್ಲ; ಮೃದುವಾದುದಲ್ಲ; ಪ್ರಶಾಂತವಾದುದೂ ಅಲ್ಲ. ಕ್ರಾಂತಿಗೆ ದಯೆದಾಕ್ಷಿಣ್ಯಗಳಿಲ್ಲ ಮತ್ತು ಗೌರವ ಮರ್ಯಾದೆಗಳೊಂದಿಗೆ ಅದಕ್ಕೆ ಕೆಲಸವಿಲ್ಲ. ಕ್ರಾಂತಿಯು ಅಡ್ಡಿ ಆತಂಕಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಔದಾರ್ಯವನ್ನು ತೋರಿಸುವುದೂ ಅಲ್ಲ. ಒಂದು ವರ್ಗವನ್ನು ಮತ್ತೊಂದು ವರ್ಗವು, ಸಜ್ಜಿತ ಹೋರಾಟದಿಂದ ನಾಶಪಡಿಸುವುದೇ ಕ್ರಾಂತಿಯಾಗಿರುತ್ತೆ.

ಮಾವೋ (ಹುನಾನ್ ರೈತರ ಚಳುವಳಿಯ ಪರಿಶೀಲನಾ ವರದಿ) ಮಾರ್ಚ್ 1927.

ಐಕ್ಯರಂಗಕ್ಕೆ

ಚಂದಾದಾರರಾಗಿ

ಪ.ಬಂಗಾಲ ಕಿಸಾನ್ ಸಭಾಕ್ಕೆ ಸುಮಾರು 4 ಮಿಲಿಯ ಸದಸ್ಯರು

1980-81ರ ಸಾಲಿನಲ್ಲಿ ಪ. ಬಂಗಾಲದಲ್ಲಿ ಕಿಸಾನ್‌ಸಭೆಗೆ ಸದಸ್ಯರಾದವರ ಸಂಖ್ಯೆ 4 ಮಿಲಿಯ ಸಮೀಪಿಸಿದೆ. ಸದಸ್ಯತ್ವವನ್ನು ನೊಂದಾಯಿಸಲು ಕೊನೆಯ ದಿನ ಮಾರ್ಚ್ 30ರ ವರೆಗಿತ್ತು.

ಜಿಲ್ಲಾವಾರು ನೊಂದಾಯಿಸಿದ ಸದಸ್ಯತ್ವದ ವಿವರ ಈ ರೀತಿ ಇದೆ.

1.	ಮಿಡ್ನಾಪುರ	—	782,616
2.	24 ಪರಗಣ	—	536,626
3.	ಬರ್ದ್ವಾನ್	—	526,762
4.	ಮುರ್ಶಿದಾಬಾದ್	—	450,000
5.	ಹೂಗ್ಲಿ	—	335,412
6.	ಬಾಂಕುರಾ	—	228,638
7.	ಹೌರಾ	—	170,357
8.	ವೀರಭೂಮ್	—	153,717
9.	ಕೂಚ್‌ಬಿಹಾರ್	—	134,012
10.	ಪುರುಲಿಯಾ	—	121,664
11.	ನಾಡಿಯಾ	—	120,001
12.	ಪಶ್ಚಿಮ ದಿನಾಜಪೂರೆ	—	118,133
13.	ಜಲಪಾಯಿಗುರಿ	—	96,606
14.	ಮಾಲ್ಡಾ	—	52,000
15.	ಡಾರ್ಜಿಲಿಂಗ್	—	34,000
			3,860,544

ಪೋಲೀಸ್ ಸ್ಟೇಷನ್ನಿಗೆ ಘೆರಾವೋ

ಶ್ರೀ ಕೆ. ಆರ್. ನರಸಿಂಹಯ್ಯನವರು ನಿವೃತ್ತ ಅಬಕಾರಿ ಅಧಿಕಾರಿ. ಬೆಳ್ತಂಗಡಿ ನಿವಾಸಿ. 20-5-81 ರಂದು ಇವರ ಮಗು 3½ವರ್ಷದ ಮಂಜುನಾಥನ ಕೊಲೆ ನಡೆಯಿತು. ಕೊಲೆಯ ಮುಂಚೆ ಬೆದರಿಕೆ ಪತ್ರ ಬಂದಿತ್ತು. ಅಲ್ಲದೆ ಮಗುವಿನ ಅಪಹರಣವಾಗಿತ್ತು. ಊರ ನಾಗರಿಕರ ಸಹಕಾರದಿಂದ ಕೊಲೆಗಾರನೆಂದು ಸಂಶಯಿತನಾದ ವ್ಯಕ್ತಿಯನ್ನು ಪೋಲೀಸರು ವಶಪಡಿಸಿಕೊಂಡಿದ್ದರು. ಪೋಲೀಸರ ಉದಾಸೀನತೆಯಿಂದ ಆ ವ್ಯಕ್ತಿ ಪೋಲೀಸ್‌ಠಾಣೆಯಿಂದ ಪರಾರಿಯಾಗಿದ್ದ. ಯುವಕರು ಬೆನ್ನಟ್ಟಿ ಅವನನ್ನು ಮತ್ತೆ ಹಿಡಿದುಕೊಟ್ಟರು.

ಪೋಲೀಸ್ ಅಧಿಕಾರಿಗಳು ತನಿಖೆ ನಡೆಸುವಲ್ಲಿ ತೋರಿಸಿದ ನಿರ್ಲಕ್ಷತನ ಹಾಗೂ ಪ್ರಕರಣವನ್ನೇ ಮುಚ್ಚಿಡಲು ಪ್ರಯತ್ನಿಸಿದ್ದನ್ನು ಕಂಡ ಸಾರ್ವಜನಿಕರು 31-5-81ರಂದು ಪೋಲೀಸ್ ಸ್ಟೇಷನ್ನಿಗೇ ಘೆರಾವೋ ಮಾಡಿದರು. ವಿಷಯ ತಿಳಿದ ಬಂಟ್ವಾಳ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕಿಶನ್ ಪ್ರಸಾದರು ಧಾವಿಸಿ ಬಂದು ತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸುವುದಾಗಿ ಹೇಳಿದರೂ ಸಾರ್ವಜನಿಕರಿಗೆ ನಂಬಿಕೆ ಬಾರದೆ ಘೆರಾವೋ ಮುಂದುವರೆದಿತ್ತು.

ಕಾರ್ಯಕ್ರಮದ ನಿಮಿತ್ತ ಬೆಳ್ತಂಗಡಿಗೆ ಆಗಮಿಸಿದ್ದ ವಿಧಾನಸಭೆಯ ಮುಖ್ಯ ಸಚೇತಕ ಶ್ರೀ ಭಾಸ್ಕರಶೆಟ್ಟಿಯವರು ಮುಖಂಡರನ್ನು ಕರೆಯಿಸಿಕೊಂಡು ಚರ್ಚಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಪ್ರಯತ್ನಿಸಲು ತನ್ನಿಂದಾದ ಸಹಕಾರ ನೀಡುವ ಭರವಸೆ ನೀಡಿದರು. ಈ ಭರವಸೆಯಿಂದಾಗಿ ಘೆರಾವೋ ಹಿಂತೆಗೆಯಲಾಯಿತು.

ಘೆರಾವೋ ನೇತೃತ್ವವನ್ನು ಬೆಳ್ತಂಗಡಿಯ ಯುವಜನರಾದ ಬಿ. ವಿಷ್ಣುಮೂರ್ತಿ, ಕೆ. ಹರೀಷ ಕುಮಾರ್, ಈಶ್ವರ ಬೈರ್, ಚಂದ್ರಕುಮಾರ, ಜಯರಾವ್ ಬಂಗೇರ, ಉಮೇಶ್ ನಾಯ್ಕ ಹಾಗೂ ಕೊಲೆಯಾದ ಮಗುವಿನ ಹಿರಿಯ ಸೋದರ ಜಯರಾಜ್ ಮೊದಲಾದವರು ವಹಿಸಿದ್ದರು.

ಕೊಲೆಯ ಪ್ರಕರಣವನ್ನು ನಿಷ್ಪಕ್ಷಪಾತದಿಂದ ನಡೆಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗೆ, ಸ್ಥಳೀಯ ಶಾಸಕರಿಗೆ, ಹಿರಿಯ ಪೋಲೀಸ್ ಅಧಿಕಾರಿಗಳಿಗೆ ಮನವಿ ಕಳಿಸಿ ಒತ್ತಾಯ ಮಾಡಲಾಗಿದೆ. ●

ಸಿ.ಐ.ಟಿ.ಯು. ದಿನಾಚರಣೆ

ದಾಂಡೇಲಿ :

30-5-81ರಂದು ಸಾಯಂಕಾಲ ದಾಂಡೇಲಿಯಲ್ಲಿ ಸಿ. ಐ. ಟಿ. ಯು. ವಿನ 11ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಬೇರೆ ಬೇರೆ ಫ್ಯಾಕ್ಟರಿಗಳ ಕಾರ್ಮಿಕರು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಕಾಂ. ಧಾರೇಶ್ವರರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಸ್ಥಳೇಕರ್, ಟಿ. ಎಸ್. ನಾಯ್ಕ, ರಾಜೇಂದ್ರ ಮೊದಲಾದವರು ಮಾತನಾಡಿ ಸಿ. ಐ. ಟಿ. ಯು.ವಿನ ಧ್ಯೇಯೋದ್ದೇಶಗಳ ಬಗ್ಗೆ ಮಾತನಾಡಿದರು. ಕೊನೆಯಲ್ಲಿ ಕಾಂ. ಉಮೇಶ್‌ನಾಯ್ಕ ವಂದಿಸಿದರು.

ಬೆಂಗಳೂರು :

30-5-81ರಂದು ಬೆಂಗಳೂರಿನಲ್ಲಿ ಸಿ. ಐ. ಟಿ. ಯು.ವಿನ 11ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ನಿಮಿತ್ತ ನಡೆದ ಸಭೆಯ ಅಧ್ಯಕ್ಷತೆಯನ್ನು ಆಟೋಚಾಲಕರ ಸಂಘದ ಅಧ್ಯಕ್ಷ ಕಾಂ. ವೆಂಕಟೇಶಗೌಡರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಎಂ. ಎಸ್. ಸಿ. ರಾವ್, ಟಿ. ಎಸ್. ಅನಂತರಾಂ, ಪಿ. ಕೆ. ಸುಬ್ರಮಣಿ ಮೊದಲಾದವರು ಮಾತನಾಡಿದರು.

ಸಿ. ಐ. ಟಿ. ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಮಾತನಾಡುತ್ತಾ ಎ. ಐ. ಟಿ. ಯು. ಸಿ.ಯಿಂದ ಹೊರಬಂದು ಸಿ. ಐ. ಟಿ. ಯು.ಸ್ಥಾಪನೆಯಾದಂದಿನಿಂದ ಬೆಳವಣಿಗೆಯನ್ನು ಪ್ರಸ್ತಾಪಿಸಿದರು. ಅಂತರಾಷ್ಟ್ರೀಯ, ರಾಷ್ಟ್ರೀಯ ಮಟ್ಟದಲ್ಲಿ ನಡೆದ ಅನೇಕ ವೀರೋಚಿತ ಹೋರಾಟಗಳನ್ನು ಪ್ರಸ್ತಾಪಿಸುತ್ತಾ ಈ ಹೋರಾಟಗಳಿಂದ ನಾವೆಲ್ಲ ಸ್ಫೂರ್ತಿಪಡೆಯಬೇಕಾಗಿದೆ ಎಂದರು. ಕೇವಲ ಆರ್ಥಿಕ ಬೇಡಿಕೆಗಳ ಈಡೇರಿಕೆಗಾಗಿ ಮಾತ್ರ ಹೋರಾಡದೆ ಅಸಮಾನತೆ ಇರುವ ಸಮಾಜವ್ಯವಸ್ಥೆ ಬದಲಾಯಿಸುವತ್ತ ಮುನ್ನಡೆಯುವ ಅಗತ್ಯವನ್ನು ಒತ್ತಿಹೇಳಿದರು.

ಕುಣಿಗಲ್ :

ಕುಣಿಗಲ್‌ನಲ್ಲಿ ಸಿ. ಐ. ಟಿ.ಯು. ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಲೀಮಾ ಬೇಗಂರವರು ವಹಿಸಿದ್ದರು.

ಕಾಂ. ಅಂಜಪ್ಪ, ಬಡೇಸಾಹೇಬರು ಮಾತನಾಡುತ್ತಾ ಸಿ.ಐ.ಟಿ.ಯು.ವಿನ ಹೋರಾಟದ ಪರಂಪರೆಯನ್ನು ಪ್ರಸ್ತಾಪಿಸಿದರು. ದೇಶದ ರಾಜಕೀಯ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ ಸರಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಹೋರಾಡಲು ಕರೆ ನೀಡಿದರು. ○

ಕಿಸಾನ್ ಸಭಾ ಸಮ್ಮೇಳನ

ಮೇ 28 ಮತ್ತು 29ರಂದು ಗುಲ್ಬರ್ಗಾ ಜಿಲ್ಲೆಯ ಬದ್ನೂರ ಎಂಬಲ್ಲಿ ಗುಲ್ಬರ್ಗಾ ಜಿಲ್ಲೆಯ ಕಿಸಾನ್ ಸಭಾ ಸಮ್ಮೇಳನ ನಡೆಯಿತು. ಸಮ್ಮೇಳನ ನಡೆಯುವ ಸ್ಥಳಕ್ಕೆ "ಎ.ಕೆ. ಗೋಪಾಲನ್ ನಗರ" ಎಂದು ಹೆಸರಿಡಲಾಗಿತ್ತು.

28ರಂದು 11 ಘಂಟೆಗೆ ಸಮ್ಮೇಳನ ಪ್ರಾರಂಭವಾಯಿತು. ರೈತ ನಾಯಕ ಕಾಂ. ಹಳಕಟ್ಟಿಯವರು ಧ್ವಜಾರೋಹಣ ಮಾಡಿದರು. ಕಿಸಾನ್ ಸಭಾ ಜಿಲ್ಲಾ ಕಾರ್ಯದರ್ಶಿ ಕಾಂ. ಕಲ್ಲಪ್ಪ ಕಿರಣಗಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಇವರು ಸಮ್ಮೇಳನವನ್ನು ಉದ್ಘಾಟಿಸಿದರು.

ಜಿಲ್ಲೆಯಾದ್ಯಂತದಿಂದ ಸುಮಾರು 100 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನದಲ್ಲಿ ರಾಜ್ಯದ ಮತ್ತು ಜಿಲ್ಲೆಯ ರೈತಾಪಿ ಜನರ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ರೈತರ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿ ಗುಂಡೂರಾಯರು ಅನುಸರಿಸುತ್ತಿರುವ ಧೋರಣೆಯನ್ನು ಸಮ್ಮೇಳನವು ಉಗ್ರವಾಗಿ ಖಂಡಿಸಿತು. ಸಮ್ಮೇಳನವು ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಮಂಜೂರು ಮಾಡಿತು.

1. ಸರಕಾರವು ಶೀಘ್ರವಾಗಿ "ಕೂಲಿಗಾಗಿ-ಕಾಳು" (Food for work) ಯೋಜನೆಯನ್ನು ಜಾರಿಗೆ ತರಬೇಕು.

2. ಚಿಕ್ಕ ಮತ್ತು ಮಧ್ಯಮ ರೀತಿಯ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ (Upper Krishna Project) ಯನ್ನು ಬೇಗನೇ ಪೂರ್ತಿಗೊಳಿಸಬೇಕು.

3. ಸಹಕಾರ ಸಂಘಗಳ ಮತ್ತು ಸರಕಾರಿ ಸಾಲಗಳನ್ನು ರದ್ದು ಮಾಡಬೇಕು.

4. ಬೆಳೆಗಳಿಗೆ ಯೋಗ್ಯ ಬೆಲೆಯನ್ನು ನಿಗದಿಮಾಡಬೇಕು.

5. ಅನೇಕ ವರ್ಷಗಳಿಂದ ನಿರ್ಲಕ್ಷಿಸಿರುವ, ಬರಗಾಲ ಪೀಡಿತ ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಹಾರ ಕಾಮಗಿರಿಗಳನ್ನು ಕೈಗೊಳ್ಳಬೇಕು. ○

ರೈತಸಂಘದ ಹೋರಾಟದ ಫಲಶ್ರುತಿ

ಬಿಜಾಪುರ ಜಿಲ್ಲಾ ರೈತಸಂಘವು ತನ್ನ ಅನವರತ ಹೋರಾಟಗಳಿಂದ ದಿನನಿತ್ಯ ವರ್ಧಿಸುತ್ತಿದೆ. ಹೋರಾಟಗಳ ಫಲವಾಗಿ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳಲಾಗಿದೆ.

ಬಿಜಾಪುರ ತಾಲ್ಲೂಕಿನ ಭೂನಾಯ ಮಂಡಳಿ ಭ್ರಷ್ಟರಿಂದ ತುಂಬಿತುಳುಕುತ್ತಿತ್ತು. ರೈತಸಂಘವು ಈ ಭ್ರಷ್ಟರ ವಿರುದ್ಧ ಹೋರಾಟಹೂಡಿತು. ಫಲವಾಗಿ ಚೇರ್‌ಮನ್ ದೇವಿಂದ್ರನ್ ಎಂಬುವರನ್ನು ವರ್ಗಮಾಡಲಾಯಿತು. ಉಳಿದ ಕಮಿಟಿ ಮೆಂಬರುಗಳನ್ನೂ ತೆಗೆದುಹಾಕುವಂತೆ ರೈತಸಂಘ ಒತ್ತಾಯಿಸುತ್ತಿದೆ.

ಬಿಜಾಪುರ ತಾಲ್ಲೂಕು ಪೈಕಿ ಇಗೆ ನಾಳ ಗ್ರಾಮಕ್ಕೆ ಪೂಲ (ಸೇತುವೆ) ಇಲ್ಲದೆ ವಿಪರೀತ ತೊಂದರೆಯಾಗುತ್ತಿದ್ದು ರೈತಸಂಘದ ಒತ್ತಾಯದ ಫಲವಾಗಿ ಸೇತುವೆ ನಿರ್ಮಾಣವಾಗಿರುವುದಲ್ಲದೇ ರೈಲ್ವೆ ಸ್ಟೇಷನ್ ಮಂಜೂರ್ ಆಗಿದೆ.

ಬಸವನ ಬಾಗೇವಾಡಿ ತಾಲ್ಲೂಕಿನ ಹಿರೇ ಆಸಂಗಿ ಗ್ರಾಮದ ಹರಿಜನರಿಗೆ ಕುಡಿಯುವ ನೀರಿಲ್ಲದೆ ಬವಣೆ ಪಡುತ್ತಿದ್ದರು. ಈಗ ಅವರಿಗೆ ಒಂದು ಬೋರ್‌ವೆಲ್ ಹಾಕಿಸಲಾಗಿದೆ.

ಸಿಂಧಗಿ ತಾಲ್ಲೂಕಿನ ಬ್ಯಾಕೋಡ ಗ್ರಾಮದಲ್ಲಿ ಮಳೆಗಾಲದಲ್ಲಿ ಹಳ್ಳದ ನೀರು ಊರೊಳಗೆ ನುಗ್ಗಿ ಅಪಾರ ಹಾನಿಯಾಗುತ್ತಿತ್ತು. ಈಗ 80 ಸಾವಿರ ರೂ. ಖರ್ಚುಮಾಡಿ ದೊಡ್ಡ ಒಡ್ಡು (ತಡೆ) ಹಾಕಿಸಲು ಶ್ರಮಿಸಲಾಯಿತು.

ಬಿಜಾಪುರ ರೈತಸಂಘದ ವತಿಯಿಂದ ಐನಾಪುರ ಗ್ರಾಮದಲ್ಲಿ ರೈತ ಸೇವಾ ಸಂಘ ಪ್ರಾರಂಭವಾಗಿದೆ.

ಗೂಗದಡ್ಡಿ ಮತ್ತು ಅಲಿಯಾಬಾದ ಲಂಬಾಣಿ ತಾಂಡೆಗಳಲ್ಲಿ ಗ್ರಾಮ ಮಂಡಳಿಗಳನ್ನು ರಚಿಸಲಾಗಿದೆ.

ಜಿಲ್ಲೆಯ ಜನತೆಯ ಬೇಡಿಕೆಗಳನ್ನು ಈಡೇರಿಸುವಲ್ಲಿ, ಬಡಜನರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಬಿಜಾಪುರ ಜಿಲ್ಲಾ ರೈತಸಂಘವು ಶ್ರಮಿಸುತ್ತಿದೆ. ○

ಮತಪ್ರದರ್ಶನ

ರಸ್ತೆಗಳ ರಿಪೇರಿ, ಬಂದಾದ ರೈಲ್ವೆಗಳ ಪುನರಾರಂಭ, ಬೆಲೆ ಏರಿಕೆಯ ತಡೆಗಟ್ಟುವಿಕೆ, ಟಾಂಗಾ (ಜಟಕಾ) ಗಳಿಗೆ ಸ್ಟ್ಯಾಂಡು, ಕುದುರೆಗಳಿಗೆ ನೀರು–ಮೇವಿನ ವ್ಯವಸ್ಥೆ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಮೇ 26ರಂದು ಬಿಜಾಪುರದಲ್ಲಿ ಟಾಂಗಾವಾಲಾರು ಮತಪ್ರದರ್ಶನನಡೆಸಿದರು. ಜಿಲ್ಲಾಧಿಕಾರಿ ಕಛೇರಿ ಎದುರು ಮತಪ್ರದರ್ಶನ ನಡೆಸಿ ಮನವಿ ಅರ್ಪಿಸಿದ ನಂತರ ನಗರ ಸಭೆಯನ್ನು, ನಗರ ಸಭೆಯ ಸದಸ್ಯರನ್ನು ಒಂದು ಘಂಟೆ ಘೆರಾವೋ ಮಾಡಿದರು.

ಕೆಂಬಾವುಟಗಳನ್ನು ಕಟ್ಟಿಕೊಂಡು ಕುದುರೆ ಗಾಡಿಗಳ ಮೆರವಣಿಗೆ ಸಾರ್ವಜನಿಕರನ್ನು ಆಕರ್ಷಿಸಿತು. ಟಾಂಗಾ ಅಸೋಸಿಯೇಷನ್ ಅಧ್ಯಕ್ಷ ರಾಜೇಸಾಬ ಕಲಾದಗಿ, ಕಾರ್ಯದರ್ಶಿ ಎಂ. ಎಫ್. ಇನಾಂದಾರ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ಎನ್. ಕೆ. ಉಪಾಧ್ಯಾಯ, ಚಕ್ರಿಯಾಸಾಬ ಕಾಲೇಬಾಗ್ ಮೊದಲಾದವರು ಮತಪ್ರದರ್ಶನದ ನೇತೃತ್ವ ವಹಿಸಿದ್ದರು. ○

ಎಸ್. ಎಫ್. ಐ. ರಾಜ್ಯಸಮಿತಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ಜೂನ್ 17ರಂದು ಬೆಂಗಳೂರಿನಲ್ಲಿ ನಡೆಯುತ್ತದೆ. ಸಭೆಯು ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗುತ್ತದೆ. ಎಸ್. ಎಫ್. ಐ. ಅಧ್ಯಕ್ಷರಾದ ಕಾಂ. ಎಂ. ಎ. ಬೇಬಿಯವರು ಈ ಸಭೆಗೆ ಹಾಜರಾಗುತ್ತಾರೆ. ರಾಜ್ಯ ಸಮಿತಿಯ ಎಲ್ಲ ಸದಸ್ಯರು ಸಕಾಲಕ್ಕೆ ಸರಿಯಾಗಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ಜೂನ್ 16ರಂದು ಮಧ್ಯಾಹ್ನ 3ಗಂಟೆಗೆ ಸರಿಯಾಗಿ ಕಾರ್ಯದರ್ಶಿ ಮಂಡಳಿಯ ಸಭೆಯು ಜರುಗುತ್ತದೆ. ರಾಜ್ಯಸಮಿತಿಯ ಪದಾಧಿಕಾರಿಗಳು ಜೂನ್ 16ರಂದೇ ಬೆಂಗಳೂರನ್ನು ತಲುಪಿ ಈ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ಎಸ್. ಆರ್ ಆರಾಧ್ಯ
ಪ್ರಧಾನ ಕಾರ್ಯದರ್ಶಿ
ಎಸ್.ಎಫ್.ಐ. ಕರ್ನಾಟಕ ರಾಜ್ಯಸಮಿತಿ

ರಾಜ್ಯದ ಹತ್ತಿಗಿರಣಿ ಕಾರ್ಮಿಕರು ಎಚ್ಚೆತ್ತುಕೊಳ್ಳಬೇಕು

ರಾಜ್ಯಮಟ್ಟದ ಹತ್ತಿಗಿರಣಿ ಕಾರ್ಮಿಕರ ಮಾತುಕತೆ ಗಂಭೀರ ಹಂತದಲ್ಲಿದೆ. ತಮಿಳುನಾಡು ಮತ್ತು ನಮ್ಮಲ್ಲಿಯ ತುಟ್ಟಿಭತ್ತೆ (DA)ಯಲ್ಲಿರುವ ವ್ಯತ್ಯಾಸ ತೊಡೆದುಹಾಕುವದು ಮಾತುಕತೆಯ ಉದ್ದೇಶವಿರಬೇಕಿತ್ತು. ಆದರೆ ಆಡಳಿತ ವರ್ಗದ ಪ್ರತಿನಿಧಿಗಳು ಮಾತುಕತೆಯ ಸಮಯದಲ್ಲಿ ಕೆಲಸದ ಹೆಚ್ಚಳ (ವರ್ಕ್‌ಲೋಡ್)ದ ಸಲಹೆಯನ್ನು ಮುಂದಿಟ್ಟಿದ್ದಾರೆ.

ಅಸ್ತಿತ್ವದಲ್ಲಿರುವ ಒಪ್ಪಂದದ ಅವಧಿ 31-12-80ರವರೆಗೆ ಇತ್ತು. ಕಳೆದ ವರ್ಷ ಅಕ್ಟೋಬರ್‌ನಲ್ಲೇ ಹೊಸದಾಗಿ ಮಾತುಕತೆಗಳು ಪ್ರಾರಂಭವಾಗಬೇಕಾಗಿತ್ತು. ಈ ವರ್ಷದ ಪ್ರಾರಂಭ (18 ಜನವರಿ)ದಲ್ಲಿ ರಾಜ್ಯಮಟ್ಟದ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ಜರಗುವವರೆಗೂ ಆಡಳಿತ ವರ್ಗಗಳು ಮಾತುಕತೆಗಳಿಗೆ ಆಗಮಿಸಿರಲಿಲ್ಲ. ವರ್ಕ್‌ಲೋಡ್‌ನ, ಮ್ಯಾನೇಜ್‌ಮೆಂಟುಗಳ "ಘಟಕ (unit)ವಾರು ಮಾತುಕತೆ" ಎಂಬ ಸಲಹೆಗಳನ್ನು ದಾವಣಗೆರೆ ಸಮ್ಮೇಳನದಲ್ಲಿ ಸಂಪೂರ್ಣವಾಗಿ ತಿರಸ್ಕರಿಸಲಾಗಿತ್ತು. ಫೆಬ್ರವರಿ ತಿಂಗಳಲ್ಲಿ ಕ್ರಿಯಾಸಮಿತಿ ಹೋರಾಟಕ್ಕೆ ಕಾರ್ಯಕ್ರಮ ರೂಪಿಸಬೇಕೆಂದೂ, ಮಾರ್ಚ್ 16ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹೂಡಬೇಕೆಂದೂ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು.

ಎಷ್ಟೇ ಪ್ರತಿಕೂಲವಿದ್ದಾಗ್ಯೂ ಮುಷ್ಕರ ನಡೆಯಿತು. ಮಾರ್ಚ್ 2ರಂದು ನಡೆದ ಮುಷ್ಕರಕ್ಕೆ ಐ.ಎನ್.ಟಿ.ಯು.ಸಿ. ಸಹಕರಿಸಲಿಲ್ಲ. ಮುಷ್ಕರದ ವಿರುದ್ಧ ಕೆಲಸಮಾಡಿತು. ಬೆಂಗಳೂರಿನಲ್ಲಿರುವ ಸಿ. ಐ. ಟಿ. ಯು. ಯೂನಿಯನ್‌ಗಳು ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಎ.ಐ.ಟಿ.ಯು.ಸಿ. ಯೂನಿಯನ್‌ಗಳು ಮಾತ್ರವಿದ್ದ ದಾವಣಗೆರೆ ಮತ್ತಿತರ ಕಡೆ ಮುಷ್ಕರ ಸಂಪೂರ್ಣ ಯಶಸ್ವಿಯಾಯಿತು. ಅನಿರ್ದಿಷ್ಟಾವಧಿ ಮುಷ್ಕರ ಸಂಘಟಿಸುವದೂ ಈ ಯೂನಿಯನ್‌ಗಳಿಗೆ ಕಷ್ಟವಿರಲಿಲ್ಲ.

ದಾವಣಗೆರೆ ಸಮ್ಮೇಳನಕ್ಕೂ ಮೊದಲು ಕ್ರಿಯಾ ಸಮಿತಿ ಜನವರಿಯಲ್ಲಿ ದಾವಣಗೆರೆಯಲ್ಲಿ ಸೇರಿತ್ತು. ಬೇಡಿಕೆಗಳ ಕುರಿತು ಚರ್ಚಿಸಲಾಯಿತು. ತಮಿಳುನಾಡಿನಲ್ಲಿರುವ ತುಟ್ಟಿಭತ್ತೆಯಷ್ಟು ಇಲ್ಲೂ ಕೊಡಬೇಕೆಂಬ ಬೇಡಿಕೆ ಮುಂದಿಟ್ಟರೆ, ಆಡಳಿತ ವರ್ಗಗಳು ತಮಿಳುನಾಡಿನಲ್ಲಿರುವಷ್ಟೇ ವರ್ಕ್‌ಲೋಡನ್ನು ಕೇಳಬಹುದೆಂದು ಕೆಲವು ಧುರೀಣರು ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ಅನೇಕರು ಈ ಅಭಿಪ್ರಾಯಕ್ಕೆ ಅಸಮ್ಮತಿ ಸೂಚಿಸಿದರು. ತುಟ್ಟಿಭತ್ಯೆ ವರ್ಕ್‌ಲೋಡ್‌ಗೆ ಸಂಬಂಧಿಸಿಲ್ಲವೆಂದು ಸ್ಪಷ್ಟವಾಗಿ ಅಭಿಪ್ರಾಯ ಪಡಲಾಯಿತು. ಮೂಲ ವೇತನ ಮಾತ್ರ ವರ್ಕ್‌ಲೋಡ್‌ಗೆ ಸಂಬಂಧಿಸಿರಬೇಕು. ಇದು ಘಟಕವಾರು ತೀರ್ಮಾನಿಸುವ ವಿಷಯ. ತಾತ್ಕಾಲಿಕ ಪರಿಹಾರವಾಗಿ 200ರೂ. ವೇತನ ಹೆಚ್ಚಳ ಮತ್ತು ತುಟ್ಟಿಭತ್ತೆಯನ್ನು ಪ್ರತಿ ಪಾಯಿಂಟಿಗೆ 40ಪೈಸೆಯಂತೆ ಕೊಡಬೇಕು...ಇವೆಲ್ಲ ಕ್ರಿಯಾ ಸಮಿತಿಯಲ್ಲಿ ಚರ್ಚಿತವಾದ ವಿಷಯಗಳು.

ಅನಿರ್ದಿಷ್ಟಾವಧಿಯ ಮುಷ್ಕರ ಹೂಡುವ ಮುನ್ನವೇ ಕಾರ್ಮಿಕ ಸಮ್ಮುಖದಲ್ಲಿ ಮಾತುಕತೆಗಳು ಏರ್ಪಟ್ಟವು. ಮಾತುಕತೆ ಸಮಯದಲ್ಲಿ, ಕೆಲವು ಧುರೀಣರು ತುಟ್ಟಿಭತ್ಯೆಯಲ್ಲಿರುವ ವ್ಯತ್ಯಾಸವನ್ನು ತೊಡೆದುಹಾಕುವ ಅಂಶದ ಬದಲು, ಸ್ವಲ್ಪ ವೇತನ ಹೆಚ್ಚಳ ನೀಡಿದರೆ ವರ್ಕ್‌ಲೋಡ್‌ಗೆ ಒಪ್ಪುವ ಲಕ್ಷಣಗಳು ಕಂಡುಬರತೊಡಗಿದವು. ಪ್ರತಿ ಕಾರ್ಮಿಕನಿಗೆ ಪ್ರತಿದಿನ 2ರೂ.ಯಂತೆ ವೇತನ ಹೆಚ್ಚಿದರೆ ಸಾಕೆಂಬ ಅಭಿಪ್ರಾಯವನ್ನು ಕೆಲವರು ಕಾರ್ಮಿಕ ಮಂತ್ರಿಯೆದುರು ವ್ಯಕ್ತಪಡಿಸಿದರು.

15ರೂ. ನಿಂದ 25ರೂ. ವರೆಗೆ ಮಾತ್ರ ಹೆಚ್ಚಿಗೆ ಮಾಡಬಹುದು; ಅದೂ ಎಲ್ಲ ಯೂನಿಯನ್‌ಗಳೂ ವರ್ಕ್‌ಲೋಡ್ ಒಪ್ಪಿದರೆ ಮಾತ್ರ ಎಂಬುದು ಆಡಳಿತವರ್ಗಗಳ ಅಭಿಪ್ರಾಯವಾಗಿತ್ತು. ಎನ್.ಟಿ.ಸಿ. ಆಡಳಿತ ವರ್ಗಗಳಂತೂ ಹೆಚ್ಚಳಕ್ಕೆ ಒಪ್ಪಲೇ ಇಲ್ಲ.

ಬೆಂಗಳೂರಿನಲ್ಲಿರುವ 2 ಎನ್.ಟಿ.ಸಿ. ಮಿಲ್‌ಗಳ ಕಾರ್ಮಿಕ ಸಂಘಗಳ ಅಧ್ಯಕ್ಷರಾಗಿರುವ ಕಾಂ. ವಿ. ಜೆ. ಕೆ. ನಾಯರ್ ಅವರು "ತುಟ್ಟಿಭತ್ತೆಯಲ್ಲಿರುವ ವ್ಯತ್ಯಾಸ ತೊಡೆದುಹಾಕುವುದಕ್ಕಾಗಿ ಒಂದು ತಾತ್ಕಾಲಿಕ ಹೆಚ್ಚಳದ ವಿಷಯಕ್ಕೆ ಮಾತ್ರ ಮಾತುಕತೆ ಸೀಮಿತವಾಗಿರಬೇಕು. ವರ್ಕ್‌ಲೋಡ್ ವಿಷಯ ಈ ಮಾತುಕತೆಗಳಿಗೆ ಸಂಬಂಧಪಟ್ಟಿದ್ದೇ ಅಲ್ಲ" ಎಂದು ಸ್ಪಷ್ಟಪಡಿಸಿದರು. ದುರ್ದೈವವಶಾತ್ ಕೆಲವು ಧುರೀಣರು ವರ್ಕ್‌ಲೋಡ್ ಒಪ್ಪುವ ಬಗ್ಗೆ ಮಾತನಾಡುತ್ತಿದ್ದರು.

ಹತ್ತಿಗಿರಣಿ ಕಾರ್ಮಿಕರ ಎಲ್ಲ ಯೂನಿಯನ್‌ಗಳೂ ಒಟ್ಟಾಗಿ, ಕಾರ್ಮಿಕರನ್ನು ಒಡೆಯುವ ಆಡಳಿತ ವರ್ಗದ ನೀತಿಯ ವಿರುದ್ಧ ಹೋರಾಡದಿದ್ದರೆ ಕಾರ್ಮಿಕರ ಹಿತರಕ್ಷಣೆ ಸಾಧ್ಯವಾಗುವದಿಲ್ಲ.

ಮಾತುಕತೆ 15-6-81ಕ್ಕೆ ಮುಂದೂಡಲ್ಪಟ್ಟಿದೆ. ಇದೇ ಸಮಯದಲ್ಲಿ ಆಡಳಿತವರ್ಗಗಳು ತಮ್ಮ ತಮ್ಮ ಫ್ಯಾಕ್ಟರಿಗಳಲ್ಲಿ ವರ್ಕ್‌ಲೋಡ್ ಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಾತುಕತೆಗಳನ್ನು ಮಾಡಬಹುದು.

ಇಂಥ ಸಂದರ್ಭದಲ್ಲಿ ಪ್ರತ್ಯೇಕವಾಗಿ ವರ್ಕ್‌ಲೋಡ್ ಬಗ್ಗೆ ನಡೆಯಬಹುದಾದ ಮಾತುಕತೆಗಳು ಎಷ್ಟರಮಟ್ಟಿಗೆ ಉಪಯೋಗವಾಗಬಹುದೆಂಬುದರ ಬಗ್ಗೆ ಯೋಚಿಸಬೇಕು. ಕೊನೆಯ ಪಕ್ಷದಲ್ಲಿ ದಾವಣಗೆರೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಯೂನಿಯನ್‌ಗಳಾದರೂ ಸಮ್ಮೇಳನದ ನಿರ್ಣಯಗಳಿಗೆ ಬದ್ಧರಾಗಬೇಕು.

ರಾಜ್ಯದ ಹತ್ತಿಗಿರಣಿ ಕಾರ್ಮಿಕರು ಎಚ್ಚೆತ್ತರೆ ಮಾತ್ರ ಆಡಳಿತವರ್ಗಗಳ ಮೋಸದ ನೀತಿಯನ್ನು ಎದುರಿಸಲು ಸಾಧ್ಯ. ●

ನಾಯನಾರ್ ಸವಾಲ್

(1ನೇ ಪುಟದಿಂದ)

ಅವರು ನಕ್ಸಲೀಯರ ವಿರುದ್ಧ ಎನ್.ಎಸ್.ಎ. ಉಪಯೋಗಿಸಲು ತಿರಸ್ಕರಿಸಿದ್ದಾರೆ. ಅವರು ಮುಂದುವರೆದು ಸಿ. ಎಚ್. ಮುಹಮ್ಮದ್ ಕೋಯಾ (ಮುಸ್ಲಿಂ ಲೀಗ್) 1969-71ರ ಅವಧಿಯಲ್ಲಿ ಗೃಹ ಮಂತ್ರಿಯಾಗಿದ್ದಾಗ ನಕ್ಸಲೀಯರ ಮೇಲೆ 48 ಹಲ್ಲೆಗಳು ನಡೆದಿದ್ದವು. 9 ಜನರು ಕೊಲ್ಲಲ್ಪಟ್ಟಿದ್ದಾರೆ. ಕೆ. ಕರುಣಾಕರನ್‌ರ ಅವಧಿಯಲ್ಲಿ 26 ಹಲ್ಲೆ ಪ್ರಕರಣಗಳು ನಡೆದಿದ್ದು 6 ಜನ ಕೊಲ್ಲಲ್ಪಟ್ಟಿದ್ದರು. ನಾವು ನಕ್ಸಲೀಯರೊಂದಿಗೆ ರಾಜಕೀಯವಾಗಿ ಹೋರಾಡುತ್ತೇವೆ" ಎಂದರು. ಕಾಂಗ್ರೆಸ್ಸಿನವರು ನಕ್ಸಲೀಯರನ್ನು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಆಪಾದಿಸಿರುವರು.

ಕೊನೆಯಲ್ಲಿ ಸರಕಾರ ಉರುಳಿಸುವಂತೆ ಕಾಂಗ್ರೆಸ್ಸಿನವರು ಕರೆಕೊಟ್ಟಿರುವುದನ್ನು ಪ್ರಸ್ತಾಪಿಸುತ್ತಾ, ಕಾಂಗ್ರೆಸ್ಸಿನವರ ಕಾರ್ಯವೈಖರಿ ಸಂಸದೀಯ ಪ್ರಜಾಸತ್ತೆಗೆ ಗಂಡಾಂತರಕಾರಿಯಾಗಿದೆ. ಪ್ರಜಾಸತ್ತೆಯಲ್ಲಿ ನಂಬಿಕೆ ಇರುವವರೆಲ್ಲ ಈ ದುಷ್ಟ ಪ್ರಯತ್ನಗಳನ್ನು ವಿಫಲಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ. ○

ರೈತಸಂಘ ರಾಜ್ಯಮಂಡಳಿ ಸದಸ್ಯರ ಅವಗಾಹನೆಗೆ

ಈಗಾಗಲೇ ಸುತ್ತೋಲೆ ಮೂಲಕ ತಿಳಿಯಪಡಿಸಿರುವಂತೆ ರೈತಸಂಘದ ರಾಜ್ಯಮಂಡಳಿ (ಕೌನ್ಸಿಲು) ಸಭೆಯು ಜೂನ್ ತಿಂಗಳ 16, 17 ಮತ್ತು 18ರಂದು ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಸೇರಲಿದೆ. ಅಖಿಲ ಭಾರತ ಕಿಸಾನ್‌ಸಭಾ ಪ್ರಧಾನಕಾರ್ಯದರ್ಶಿ ಕಾಮ್ರೇಡ್ ಚಾತುಣ್ಣಿ ಮಾಸ್ತರ್ ಅವರೂ ಈ ಸಭೆಯಲ್ಲಿ ಭಾಗವಹಿಸುವರು. ಸವದತ್ತಿಯು ಧಾರವಾಡ-ಹುಬ್ಬಳ್ಳಿಗಳಿಗೆ ಸಮೀಪ (ಒಂದು ತಾಸಿನ ಪ್ರಯಾಣ) ವಿದ್ದು, ಬೇಕಾದಷ್ಟು ಬಸ್ಸುಗಳ ಸೌಲಭ್ಯವಿದೆ. ಸವದತ್ತಿ ಬಸ್ ನಿಲ್ದಾಣದಲ್ಲಿ ದಿನಾಂಕ 16ರಂದು ಮುಂಜಾನೆಯಿಂದ ಮಧ್ಯಾಹ್ನ ತನಕ ಸ್ವಯಂಸೇವಕರನ್ನಿರಿಸಲಾಗುವುದು. ತಡವಾಗಿ ಅಥವಾ ಮೊದಲೇ ಬಂದವರು ಸವದತ್ತಿ ಪುರಸಭೆಯ ಮಾಜಿ ಅಧ್ಯಕ್ಷ ಕಾಮ್ರೇಡ್ ಎಸ್. ಎಚ್. ಕಪ್ಪಣ್ಣನವರ್ ಅವರನ್ನು ಸಂಪರ್ಕಿಸಬಹುದು.

ರಾಜ್ಯಮಂಡಳಿಯ ಎಲ್ಲಾ ಸದಸ್ಯರುಗಳು ಮತ್ತು ಆಮಂತ್ರಿತರು ತಪ್ಪದೆ ಹಾಜರಾಗಬೇಕು. ರಾಜ್ಯ ಕೌನ್ಸಿಲಿಗೆ ಸದಸ್ಯರಿಲ್ಲದ ಕಡೆಯಿಂದ ರೈತಸಂಘಟನೆಯಲ್ಲಿ ಕೆಲಸಮಾಡುತ್ತಿರುವ ಮತ್ತು ಮಾಡಲು ಇಚ್ಛಿಸುವ ಕೆಲವು ಮುಖ್ಯ ಕಾಮ್ರೇಡುಗಳನ್ನು ಕಳುಹಿಸಿಕೊಡಲು ಸಂಬಂಧಪಟ್ಟವರು ಕ್ರಮವಹಿಸಬೇಕು.

ಪಿ. ರಾಮಚಂದ್ರರಾವ್
ಪ್ರಾಂತ ರೈತಸಂಘ ಪ್ರಧಾನಕಾರ್ಯದರ್ಶಿ

ಮಹಿಳೆಯರಿಗೆ ಕಾಂ. ಸುಶೀಲಾ ಗೋಪಾಲನ್ ಕರೆ

(1ನೇ ಪುಟದಿಂದ)

ಆಯೋಗವೊಂದನ್ನು ರಚಿಸಬೇಕು, ಬೆಲೆಏರಿಕೆ ತಡೆಗಟ್ಟಬೇಕು, ಸಾರ್ವಜನಿಕ ವಿತರಣೆ ವ್ಯವಸ್ಥೆಗಳನ್ನು ಕೈಗೊಳ್ಳಬೇಕು ಎಂದು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ 3ರ ಮಧ್ಯಾಹ್ನದವರೆಗೆ ನಡೆದ ಚರ್ಚೆಯ ನಂತರ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗೆ 16 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಈ ಕಾರ್ಯಕಾರಿ ಸಮಿತಿಯು ಕಾಂ. ದೇವಕಿವಾರಿಯರ್ ಇವರನ್ನು ಅಧ್ಯಕ್ಷೆಯನ್ನಾಗಿ, ಎನ್. ಗಾಯಿತ್ರಿ ದೇವಿ ಇವರನ್ನು ಪ್ರಧಾನಕಾರ್ಯದರ್ಶಿಯಾಗಿ, ಮತ್ತು ಇತರ ನಾಲ್ಕು ಪದಾಧಿಕಾರಿಗಳನ್ನು ಚುನಾಯಿಸಿತು.

ಅಂದು ಸಾಯಂಕಾಲ ನಗರದ ಚಿಕ್ಕಲಾಲ್‌ಬಾಗ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಅದಕ್ಕೆ ಮೊದಲು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. "ಮಹಿಳೆಯರೇ ಒಂದಾಗಿ;ಹೋರಾಟಕ್ಕೆ ಮುಂದಾಗಿ", "ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗೆ ಜಯವಾಗಲಿ", "ಮಹಿಳೆಯರ ಮೇಲಿನ ದೌರ್ಜನ್ಯಗಳು ನಿಲ್ಲಲಿ" ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಸಾಗಿದ ಮೆರವಣಿಗೆ ಬೆಂಗಳೂರು ನಾಗರಿಕರನ್ನು ಆಕರ್ಷಿಸಿತು.

ಮಳೆಸುರಿಯುತ್ತಿದ್ದರೂ ಉತ್ಸಾಹಿತ ಮಹಿಳೆಯರು ಚದುರದೇ ಮುಖಂಡರ ಭಾಷಣಗಳನ್ನು ಶಾಂತವಾಗಿ ಆಲಿಸಿದರು. ಸಭೆಯನ್ನುದ್ದೇಶಿಸಿ ಕಾಂ. ಸುಶೀಲಾ, ಡಾ॥ ಅನುಪಮಾ ನಿರಂಜನ, ವಿಮಲಾ ರಣದಿವೆ (ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ), ರಾಜ್ಯಸಂಘಟನೆಯ ಅಧ್ಯಕ್ಷೆ ದೇವಕಿ ವಾರಿಯರ್ ಮೊದಲಾದವರು ಮಾತನಾಡಿದರು. ಮಹಿಳೆಯರು ತಮ್ಮ ಮೇಲಿನ ಶೋಷಣೆಯ ವಿರುದ್ಧ ಹೋರಾಡುವುದರೊಂದಿಗೆ, ಇತರ ದುಡಿಯುವ ವರ್ಗದೊಟ್ಟಿಗೆ ಜೊತೆಗೂಡಿ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಮತ್ತು ಸಮಾಜ ಬದಲಾವಣೆಗಾಗಿ ಹೋರಾಡಬೇಕೆಂಬುದು ಭಾಷಣಕಾರರ ಒಟ್ಟಾಭಿಪ್ರಾಯವಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮೇರಿ ದೇವಾಸಿಯಾ ವಹಿಸಿದ್ದರು. [ಸಮ್ಮೇಳನದ ಕಾರ್ಯಕಲಾಪಗಳ ವಿವರ ಮುಂದಿನ ವಾರಕ್ಕೆ] ●

ಯಶಸ್ವೀ ಮುಷ್ಕರ

ಹರಿಯಾಣದಲ್ಲಿ ರಾಜ್ಯದಾದ್ಯಂತ ಕನಿಷ್ಟ ಕೂಲಿಯನ್ನು 500 ರೂ. ವೆಂದು ನಿಗದಿಪಡಿಸಬೇಕೆಂದು ಒತ್ತಾಯಿಸಿ ಮೇ 21ರಂದು ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ನಡೆದಿದೆ.

ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ., ಎಚ್. ಎಂ. ಎಸ್., ಬಿ. ಎಂ. ಎಸ್.ಗಳು ಜಂಟಿಯಾಗಿ ಈ ಮುಷ್ಕರಕ್ಕೆ ಕರೆಕೊಟ್ಟಿದ್ದವು. ಹರಿಯಾಣದ ಕಾರ್ಮಿಕವರ್ಗ ಅತ್ಯುತ್ಸಾಹದಿಂದ ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಾಜ್ಯದ ಕಾರ್ಮಿಕ ವರ್ಗದ ಮೇಲೆ ದಿನನಿತ್ಯ ನಡೆಯುತ್ತಿರುವ ದಬ್ಬಾಳಿಕೆ ಪ್ರತಿಭಟಿಸುವುದೂ ಈ ಮುಷ್ಕರದ ಉದ್ದೇಶಗಳಲ್ಲೊಂದಾಗಿತ್ತು.

ಇತ್ತೀಚೆಗೆ ಫರೀದಾಬಾದ್, ಹನ್ಸಿ, ಸೋನೆಪಟ್ ಮತ್ತು ಸಿರ್ಸಾ ಮುಂತಾದ ಕಡೆ ನಡೆದ ಕಾರ್ಮಿಕರ ಹೋರಾಟ, ಮೇ 21ರ ಸಾರ್ವತ್ರಿಕ ಮುಷ್ಕರ ಇವೆಲ್ಲಾ ಹರಿಯಾಣದಲ್ಲಿ ಬೆಳೆಯುತ್ತಿರುವ ಕಾರ್ಮಿಕರ ಐಕ್ಯತೆಗೆ ದ್ಯೋತಕವಾಗಿವೆ. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT